UNIVERSAL
LIBRARY
OU_200525
UNIVERSAL
LIBRARY

# ಗ್ರಾಮರಾಜ್ಯ

# ग्राम राज

★

ವಿನೋಬಾ

★

ಸರ್ವ ಸೇವಾ ಸಂಘ ಪ್ರಕಾಶನ

ನಂ. 17. I ಮೈನ್ ರೋಡ್

ಚಾಮರಾಜಪೇಟೆ :: ಬೆಂಗಳೂರು-2.

ಪ್ರಥಮ ಮುದ್ರಣ—5,000
ಮೇ—1957
ಬೆಲೆ : 0—2—0 (12 ನಯೆ ಪೈಸೆ)

ಮುದ್ರಕರು :
ಎಮ್. ಬಿ. ಶಂಕರ್, ಬಿ.ಎ. (ಆನರ್ಸ್)
ಯುಗಾಂತರ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು-2

# ಗ್ರಾಮರಾಜ್ಯ

## ೧

## ಹಳ್ಳಿಹಳ್ಳಿಯಲ್ಲೂ ಸ್ವರಾಜ್ಯ

ಸ್ವರಾಜ್ಯ ಬಂದ ಮೇಲೆ ಹಳ್ಳಿಯ ಜನರ ಸ್ಥಿತಿ ಸುಧಾರಿಸೀತು ಎಂದು ಜನರು ಆಸೆಗೊಂಡಿದ್ದರು. ಅವರು ಹಾಗೆ ಬಯಸಿದುದೂ ತಪ್ಪಲ್ಲ. ಸ್ವರಾಜ್ಯದಲ್ಲಿ ಜನತೆಯ ಸ್ಥಿತಿ ಉತ್ತಮಗೊಳ್ಳದಿದ್ದರೆ ಆ ಸ್ವರಾಜ್ಯಕ್ಕೆ ಬೆಲೆಯಾದರೂ ಏನು? ಆದುದರಿಂದ ಹಳ್ಳಿಯ ಸ್ಥಿತಿ ಸುಧಾರಿಸೀತೆಂಬ ಆಸೆ ಇಟ್ಟುಕೊಂಡುದು ಸರಿಯೆ.

### ನಿಮಗೆ ನೀವೇ ದೊರೆಗಳು

ಆದರೆ ಸ್ವರಾಜ್ಯ ಬಂದ ಮೇಲೆ ನಮ್ಮ ಸ್ಥಿತಿಯನ್ನು ಉತ್ತಮಗೊಳಿಸುವುದು ನಮ್ಮ ಕೈಯಲ್ಲೇ ಇದೆ ಎಂಬುದು ಜನರಿಗೆ ತಿಳಿದಿಲ್ಲ. ಹಿಂದೆ ಮುಸಲ್ಮಾನರದು ಇಂಗ್ಲೀಷರದು ರಾಜ್ಯವಿತ್ತಲ್ಲ, ಹಾಗೇ ಈಗ ಕಾಂಗ್ರೆಸಿನ ರಾಜ್ಯ ಬಂದಿದೆ ಎಂದು ಅವರು ತಿಳಿದಿದಾರೆ. ಆದರೆ ಮುಸಲ್ಮಾನರ ರಾಜ್ಯದಲ್ಲಿ ಇಂಗ್ಲೀಷರ ರಾಜ್ಯದಲ್ಲಿ ಅಥವಾ ಬೇರೆ ಯಾವ ರಾಜನ ರಾಜ್ಯದಲ್ಲೂ ನಿಮ್ಮ ವೋಟನ್ನು ಕೇಳಿರಲಿಲ್ಲ. ಆ ರಾಜ್ಯಗಳೆಲ್ಲ ಹಳತಾದವು. ಅದೆಲ್ಲ ರಾಜರ ರಾಜ್ಯ, ಸುಲ್ತಾನರ ರಾಜ್ಯ. ಈಗಿನ ನಮ್ಮ ಸ್ವರಾಜ್ಯ ಜನರ ರಾಜ್ಯ. ಈಗ ಇಲ್ಲಿ ರಾಜ್ಯ ನಡೆಸುವವರು ಜನತೆ ಆರಿಸಿದ ಸೇವಕರು. ಈಗ ನಿಮಗೆಲ್ಲರಿಗೂ ಅಧಿಕಾರ ಕೊಟ್ಟಿದಾರೆ. ನಿಮಗೆ ಇಷ್ಟ ಬಂದ ಹಾಗೆ ನಿಮ್ಮ ರಾಜ್ಯವನ್ನು ನಡೆಸಿ. ನಿಮ್ಮ ರಾಜ್ಯವನ್ನು ನಡೆಸಲು ನಿಮಗೆ ಯಾವ ಸೇವಕರು ಬೇಕೋ ನೀವೇ ನಿರ್ಧರಿಸಿಕೊಳ್ಳಿ. ಈ ಪ್ರಕಾರ ನಿಮ್ಮನ್ನು ವೋಟು ಕೇಳಿದರು. ನೀವು ಕೊಟ್ಟಿರಿ. ಐದು ವರ್ಷದವರೆಗೆ ನಿಮ್ಮ ಸೇವಕರನ್ನು ಗೊತ್ತು ಮಾಡಿದಿರಿ. ರೈತರು ವರ್ಷದ ಪೂರ್ತಿ ಆಳನ್ನು ಇಟ್ಟುಕೊಳ್ಳುತ್ತಾರೆ. ಆ ಆಳು ಚೆನ್ನಾಗಿ ಕೆಲಸ ಮಾಡಿದರೆ ಮುಂದಿನ ವರ್ಷವೂ ಅವನನ್ನೇ ಇಟ್ಟುಕೊಳ್ಳು

ತ್ತಾರೆ. ಇಲ್ಲದಿದ್ದರೆ ಬೇರೆ ಆಳನ್ನು ಗೊತ್ತುಮಾಡಿಕೊಳ್ಳುತ್ತಾರೆ. ಅದೇ ರೀತಿ ನೀವೂ ಐದು ವರ್ಷಕ್ಕಾಗಿ ಸೇವಕರನ್ನು ಆರಿಸಿಕೊಂಡಿರಿ. ಅವರ ಕೆಲಸ ನಿಮಗೆ ಇಷ್ಟವಾದರೆ ಮತ್ತೊಮ್ಮೆ ಅವರನ್ನು ಆರಿಸೀರಿ. ಇಲ್ಲವಾದರೆ ಬೇರೆಯವರನ್ನು ಆರಿಸೀರಿ.

ಇದರ ಅರ್ಥ ಗೊತ್ತೆ? ಇಲ್ಲಿ ಕುಳಿತಿರುವ ನೀವೆಲ್ಲರೂ ದೊರೆಗಳು, ಒಡೆಯರು. ನೀವು ಪ್ರತಿಯೊಬ್ಬರೂ ಬಿಡಿಬಿಡಿಯಾಗಿ ಒಡೆಯರಲ್ಲ. ಎಲ್ಲರೂ ಕಲೆತು ದೊರೆಗಳು. ನೀವೇನೋ ದೊರೆಗಳಾದಿರಿ. ಆದರೆ ನಿಮಗೆ ಏನು ಅಧಿಕಾರವೆಂಬುದೇ ನಿಮಗೆ ತಿಳಿದಿಲ್ಲ. ಏಕೆಂದರೆ, ಏನೋ ಒಂದು ನಾಟಕ ದಂತೆ ಎಲ್ಲವೂ ನಡೆದುಹೋಯಿತು. ನಿಮ್ಮ ಮತವನ್ನು ಕೇಳಿದರು. ನೀವು ಮತ ಕೊಟ್ಟಿರಿ. ಒಂದು ಮನೆಯಲ್ಲಿ ನಾಲ್ಕೈದು ವರ್ಷದ ದಡ್ಡ, ಮೂರ್ಖ ಮಕ್ಕಳಿದಾರೆ. ಮನೆಯ ಯಜಮಾನತನವನ್ನು ಯಾರು ನಡೆಸಬೇಕು ಎಂದು ಅವರನ್ನು ಕೇಳಿದರೆ, ಅಥವಾ ಅವರನ್ನು ವೋಟು ಕೇಳಿದರೆ, ಅವರು ವೋಟು ಕೊಟ್ಟಾರೆಯೆ? ಇದೇನು ನಾಟಕ ಮಾಡುತ್ತೀರಿ ನೀವು ಎಂದಾರು ಅವರು. ನೀವು ನಮ್ಮ ತಾಯಿ ತಂದೆ. ನೀವೇ ನಮ್ಮ ಯೋಗಕ್ಷೇಮ ನೋಡಿ ಎಂದಾರು. ಅದೇ ರೀತಿ ಜನರೂ ಕಾಂಗ್ರೆಸಿಗರಿಗೆ ಹೇಳಿದರು: ನೀವು ದೊಡ್ಡವರು, ನೀವು ನಮ್ಮ ಸೇವೆ ಮಾಡಿದೀರಿ, ನೀವು ನಮ್ಮ ತಾಯಿತಂದೆ, ನೀವೇ ರಾಜ್ಯ ನಡೆಸಿ. ಅತ್ತ ಅವರು ಹೇಳುತ್ತಾರೆ: ನಾವು ನಿಮ್ಮ ಸೇವಕ ರಾಗಬಯಸುತ್ತೇವೆ, ನೀವು ನಮ್ಮನ್ನು ಸೇವಕರಾಗಿಟ್ಟರೆ ನಾವು ಸೇವೆ ಮಾಡುತ್ತೇವೆ. ಇತ್ತ ಇವರು ಹೇಳುತ್ತಾರೆ: ನೀವೇ ನಮ್ಮ ತಾಯಿತಂದೆ, ನೀವೇ ನಮ್ಮ ಯೋಗಕ್ಷೇಮ ನೋಡಿಕೊಳ್ಳಿ.

ಅಧಿಕಾರ ಒಬ್ಬರು ಕೊಟ್ಟರೆ ಬರುವಂಥದಲ್ಲ. ಅಧಿಕಾರ, ಸತ್ತೆ ಒಳಗಿಂದ ಬರಬೇಕು. ಹಿಂದುಸ್ತಾನದ ಜನರೇನು ಮೂರ್ಖರಲ್ಲ, ಸಾಕಷ್ಟು ಅರಿವುಳ್ಳ ವರು. ಮೊನ್ನೆ ಚುನಾವಣೆ ನಡೆಯಿತಲ್ಲ. ಎಷ್ಟು ಚಲೋ ರೀತಿಯಲ್ಲಿ ನಡೆಯಿತು. ಇಲ್ಲಿ ಎಷ್ಟು ಜಗಳ, ಕದನ ಆದೀತೋ, ಏನೇನು ನಡೆದೀತೋ ಎಂದು ಜನಕ್ಕೆ ಅನಿಸಿತ್ತು. ಆದರೆ ಅಂಥದೇನೂ ನಡೆಯಲಿಲ್ಲ. ಹೊರದೇಶ ದವರಿಗಂತೂ ಅಚ್ಚರಿಯಾಯಿತು: ಹಿಂದುಸ್ತಾನದ ಜನ ಅನಕ್ಷರಸ್ಥರು, ಆದರೂ ಎಷ್ಟು ಚಲೋ ರೀತಿಯಲ್ಲಿ ಚುನಾವಣೆ ನಡೆಸಿದರಲ್ಲ. ಇದಕ್ಕೆ ಕಾರಣ—ಹಿಂದುಸ್ತಾನದ ಜನರಿಗೆ ಹತ್ತು ಸಾವಿರ ವರ್ಷದ ಅನುಭವವಿದೆ.

ಅನಕ್ಷರಸ್ಥರೇ ನಿಜ. ಆದರೆ ಅನುಭವಶಾಲಿಗಳು. ಆದುದರಿಂದ ಜ್ಞಾನಿಗಳು. ಅದರಿಂದಲೇ ಇಲ್ಲಿನ ಚುನಾವಣೆ ಬಹಳ ಚಲೋ ರೀತಿಯಲ್ಲಿ ನಡೆಯಿತು.

ಹಿಂದುಸ್ಥಾನದ ಜನರು ಅರಿತವರಾದರೂ ಅವರಿಗೆ ಬಹಳ ಕಾಲ ಗುಲಾಮಗಿರಿಯ ಅಭ್ಯಾಸವಾಗಿದೆ. ಸರಕಾರ ತಾಯಿತಂದೆಯ ಹಾಗೆ ನಮ್ಮ ಚಿಂತೆ ಮಾಡುತ್ತದೆ ಎಂದು ತಿಳಿದಿದ್ದಾರೆ. ಆದುದರಿಂದ ಅವರ ಕೈಗೆ ಅಧಿಕಾರ ಬಂದಿರುವಾಗ ನಿಜವಾಗಿಯೂ ನಮ್ಮ ಕೈಗೆ ಅಧಿಕಾರ ಬಂದಿದೆ ಎಂಬ ಅನುಭವ ಅವರಿಗೆ ಆಗಬೇಕು. ತಾಯಿಗೆ ತಾಯ್ತನದ ಅಧಿಕಾರವನ್ನು ಯಾರು ಕೊಡುತ್ತಾರೆ? ತಾಯಿ ತನ್ನೊಳಗೆ ತಾಯ್ತನವನ್ನು ಅನುಭವಿಸುತ್ತಾಳೆ. ಸಿಂಹಕ್ಕೆ ವನರಾಜ ಪಟ್ಟವನ್ನು ಯಾರು ಕಟ್ಟಿದರು? ತನ್ನ ಅಧಿಕಾರವನ್ನು ತಾನೇ ಅರಿತುಕೊಳ್ಳುತ್ತದೆ. ಹಾಗೆಯೇ ಒಳಗಡೆ ಸ್ವರಾಜ್ಯ ಶಕ್ತಿಯ ಅನುಭವವಾಗಬೇಕು ಜನರಿಗೆ. ಅದು ಹೇಗಾಗಬೇಕು? ಹಳ್ಳಿ ಹಳ್ಳಿಯ ಜನರೆಲ್ಲ ದಿಲ್ಲಿಯ ರಾಜ್ಯವನ್ನು ನಡೆಸಬಲ್ಲರೆ? ಹಳ್ಳಿ ಹಳ್ಳಿಯ ಜನರು ಹಳ್ಳಿ ಹಳ್ಳಿಯ ರಾಜ್ಯವನ್ನು ನಡೆಸಿಯಾರು. ಆಗ ಅವರಿಗೆ ರಾಜ್ಯ ನಡೆಸುವ ಅನುಭವವಾದೀತು.

## ಸೇವೆಯ ಅಧಿಕಾರ

ಈ ಕಾಲದಲ್ಲಿ ನಡೆವ ರಾಜ್ಯ ರಾಜ್ಯವಲ್ಲ, ಪ್ರಾಜ್ಯ. ಜನರದು ಇದು. ಹಿಂದೆ ಜನರನ್ನು ತುಳಿದವನೇ ರಾಜ. ಸಿಂಹ ಅಡವಿಗೆ ರಾಜನಂತೆ. ಅಡವಿಯ ಪ್ರಾಣಿಗಳನ್ನು ಯಾವುದು ತಿನ್ನಬಲ್ಲದೋ ಅದು ರಾಜ. ಸಿಂಹವನ್ನು ಮೃಗರಾಜ ಎನ್ನುತ್ತಾರೆ. ರಾಜನ ದರ್ಶನವಾದರೆ ಸಾಕು, ಮೃಗಗಳೆಲ್ಲ ಥರಥರ ನಡುಗುತ್ತವೆ. ಇಂಥ ರಾಜ್ಯ ಈಗ ನಡೆಯದು. ಈಗ ರಾಜ್ಯಾಧಿಕಾರ ಸೇವೆಯ ಅಧಿಕಾರವಾದೀತು. ಮನೆಯಲ್ಲಿ ತಾಯಿಗೆ ಏನು ಅಧಿಕಾರ? ಮಗುವಿಗೆ ಹಸಿವಾದರೆ ಹಾಲು ಕುಡಿಸುವುದು ತಾಯಿಯ ಮೊದಲನೆ ಅಧಿಕಾರ. ಮಗುವನ್ನು ಮೊದಲು ಮಲಗಿಸಿ ಆಮೇಲೆ ತಾನು ಮಲಗುವುದು ಎರಡನೆ ಅಧಿಕಾರ. ಮಗು ಕಾಯಿಲೆ ಬಿದ್ದರೆ ರಾತ್ರಿ ಜಾಗರಣೆ ಮಾಡುವುದು ಮೂರನೆ ಅಧಿಕಾರ. ಮನೆಯಲ್ಲಿ ತಿನ್ನುವ ಪದಾರ್ಥ ಕಡಮೆಯಿದ್ದರೆ ಮೊದಲು ಇದ್ದುದನ್ನು ಮಗುವಿಗೆ ತಿನ್ನಿಸಿ, ಆಮೇಲೆ ಏನೂ ಮಿಗದಿದ್ದರೆ ಉಪವಾಸ ಮಾಡುವುದು ನಾಲ್ಕನೆ ಅಧಿಕಾರ. ಇದೇ ನಮ್ಮ **ಮಾತೃರಾಜ್ಯ**; ಅಲ್ಲವೇ? ಈ ಮಾದರಿಯನ್ನು ನಾವು ಹಳ್ಳಿ ಹಳ್ಳಿಯಲ್ಲೂ ತೋರಿಸಬೇಕಾದೀತು.

ಎಂದರೆ ಒಂದು ತುಂಡು–ಹಳ್ಳಿಯಲ್ಲಿ. ಮುಂದಿನ ಶಿಕ್ಷಣ ಪಡೆಯಲು ಹಳ್ಳಿಯವರು ಊರು ಬಿಟ್ಟು ಹೊರಗೆ ಹೋಗಬೇಕು. ಇದಕ್ಕೆ ಏನೂ ಅರ್ಥವಿಲ್ಲ. ನನ್ನ ಹಳ್ಳಿ ಯಲ್ಲಿಯೇ ನನಗೆ ಪೂರ್ಣ ಶಿಕ್ಷಣ ಸಿಗಬೇಕು. ನನ್ನ ಹಳ್ಳಿ ಒಂದು ತುಣುಕಲ್ಲ, ಪೂರ್ಣವಾದುದು. 'ಪೂರ್ಣಮದಃ ಪೂರ್ಣಮಿದಂ'—ಅದೂ ಪೂರ್ಣ ಇದೂ ಪೂರ್ಣ. ಆದರೆ ಈ ಜನರು ಇದೂ ತುಣುಕು, ಅದೂ ತುಣುಕು, ಎಲ್ಲಾ ಸೇರಿ ಒಂದು ಪೂರ್ಣವಸ್ತು ಎನ್ನುತ್ತಾರೆ. ನಮ್ಮ ಯೋಜನೆಯಲ್ಲಿ ಹೀಗೆಯೇ ತುಂಡು ತುಂಡು ಜೋಡಿಸಿಪೂರ್ಣವಸ್ತುವನ್ನು ಮಾಡುವ ಮಾತು ಇಲ್ಲ. ರಾಜ್ಯದ ಎಲ್ಲಾ ವಿಭಾಗಗಳೂ ಹಳ್ಳಿಯಲ್ಲಿರಬೇಕು. ಹಳ್ಳಿ ಒಂದು ಪರಿಪೂರ್ಣ ರಾಜ್ಯವಾಗಬೇಕು–ಇದು ನಮ್ಮ ಬಯಕೆ.

ಹೀಗೆ ಚಿಕ್ಕಪುಟ್ಟ ಹಳ್ಳಿಗಳಲ್ಲೂ ರಾಜ್ಯವಾದರೆ, ಹಳ್ಳಿಹಳ್ಳಿಯಲ್ಲೂ ರಾಜ್ಯಗಾರ ದುರಂಧರರ ಗುಂಪು ಹುಟ್ಟೀತು. ಪ್ರತಿ ಹಳ್ಳಿಯಲ್ಲೂ ಅನುಭವಶಾಲಿ ಜನರು ಆದಾರು. ದಿಲ್ಲಿಯು ವರಿಗೆ ರಾಜ್ಯನಡೆಸುವುದು ಕಷ್ಟವೆನಿಸಿದಾಗ ನಾಲ್ಕು ಹಳ್ಳಿಗಳಿಗೆ ಹೋಗಿ ಅಲ್ಲಿ ಅವರು ಹೇಗೆ ರಾಜ್ಯನಡೆಸುತ್ತಾರೋ ನೋಡೋಣ ಎನಿಸೀತು. ಏಕೆಂದರೆ, ಆಗ ರಾಜ್ಯಶಾಸ್ತ್ರ–ವಿದ್ಯಾಪಾರಂಗತ ಜನ ಹಳ್ಳಿಹಳ್ಳಿಯಲ್ಲೂ ಇದ್ದಾರು. ಆದುದರಿಂದ ಹಳ್ಳಿಹಳ್ಳಿಯಲ್ಲೂ ವಿದ್ಯಾಪೀಠವಿರಬೇಕು. ಈಗಂತೂ ಹಳ್ಳಿಗಳಲ್ಲಿ ರಾಜ್ಯಶಾಸ್ತ್ರಬಲ್ಲವರು ಯಾರೂ ಇಲ್ಲ. ಜಿಲ್ಲೆಜಿಲ್ಲೆಗಳಲ್ಲೂ ರಾಜ್ಯಶಾಸ್ತ್ರ ಬಲ್ಲವರು ಇಲ್ಲ ಎನ್ನುತ್ತಾರೆ. ಇದೇ ಆಂಧ್ರ ಪ್ರದೇಶದಲ್ಲಿ ರಾಜ್ಯಶಾಸ್ತ್ರವನ್ನು ಬಲ್ಲವರು ಇಬ್ಬರೋ ಮೂವರೋ ಇದ್ದಾರು. ಸ್ವರಾಜ್ಯ ನಡೆಸಲು ಹೀಗೆ ರಾಜ್ಯಶಾಸ್ತ್ರವೇತ್ತರ ಸಂಖ್ಯೆ ಇಷ್ಟು ಕಡಮೆ ಇದ್ದರೆ ಆದೀತೆ? ಆದುದರಿಂದ ಹಳ್ಳಿಹಳ್ಳಿಯಲ್ಲೂ ಬಲ್ಲವರು ಬೇಕು. ಈಗಿನ ಪರಿಸ್ಥಿತಿ ಹೇಗಿದೆ ಎಂದರೆ ನನಗೆ ಪ್ರಧಾನಪದವಿಯಿಂದ ವಿಶ್ರಾಂತಿ ಕೊಡಿ ಎಂದು ಪಂಡಿತ ನೆಹರೂ ಒಂದು ಸಲ ಕೇಳಿದರೆ, ಎಲ್ಲರೂ ಗಾಬರಿಗೊಂಡು ನೀವಿಲ್ಲದಿದ್ದರೆ ನಮ್ಮ ಪಥ ನಡೆಯದಲ್ಲ–ಎನ್ನತೊಡಗಿದರು. ಇದು ಸ್ವರಾಜ್ಯವಲ್ಲ. ಪಂಡಿತ ನೆಹರೂ ನನಗೆ ವಿಶ್ರಾಂತಿಬೇಕು ಎಂದಾಗ ಆಗತ್ಯವಾಗಿ ಆಗಬಹುದು, ಇಲ್ಲಿಯವರೆಗೆ ಅಪಾರ ಸೇವೆ ಮಾಡಿದೀರಿ, ನಿಮಗೆ ಈಗ ವಿಶ್ರಾಂತಿಯ ಅಧಿಕಾರವಿದೆ ಎನ್ನಬೇಕು. ಆಗಲೇ ಸ್ವರಾಜ್ಯ.

## ಸತ್ತೆಯ ವಿಕೇಂದ್ರೀಕರಣ

ದಿಲ್ಲಿಯಲ್ಲಿ ಕೇಂದ್ರೀಕೃತವಾಗಿರುವ ರಾಜ್ಯಸತ್ತೆಯನ್ನು ಹಳ್ಳಿಹಳ್ಳಿಗೂ ಹಂಚಬೇಕು. ನಾನು ಪರಮೇಶ್ವರನ ಭಕ್ತ. ಆದುದರಿಂದ ಈಶ್ವರನ ದೃಷ್ಟಾಂತವನ್ನು ಕೊಡುತ್ತೇನೆ. ಈಶ್ವರ ತನ್ನ ಬುದ್ಧಿಯನ್ನೆಲ್ಲಾ ವೈಕುಂಠ ದಲ್ಲೇ ಇಟ್ಟುಕೊಂಡು, ಯಾವ ಪ್ರಾಣಿಗೂ ಬುದ್ಧಿಯನ್ನು ಕೊಡದಿದ್ದರೆ, ಈ ಲೋಕ ನಡೆಯುತ್ತಿತ್ತೆ ? ಆಗ ಯಾವ ಮನುಷ್ಯನಿಗಾದರೂ ಬುದ್ಧಿ ಬೇಕಾದರೆ ವೈಕುಂಠಕ್ಕೆ ತಂತಿ ಕೊಟ್ಟು ಸ್ವಲ್ಪ ಬುದ್ಧಿಯನ್ನು ತರಿಸಿಕೊಳ್ಳಬೇಕಾಗುತ್ತಿತ್ತು. ಈಗ ನಿಮ್ಮ ಮಂತ್ರಿಗಳು ವಿಮಾನದಲ್ಲಿ ಓಡಾಡಬೇಕಾಗಿದೆ. ಭಗವಂತ ಎಷ್ಟು ಓಡಬೇಕೋ ಹಾಗಾದರೆ ? ಆದರೆ ದೇವರ ಬಹಳ ಚಲೋ ಯೋಚನೆ ಮಾಡಿದಾನೆ; ಎಲ್ಲರಿಗೂ ಬುದ್ಧಿಯನ್ನು ಹಂಚಿದಾನೆ. ಮನುಷ್ಯನಿಗೆ ಬುದ್ಧಿಯನ್ನು ಕೊಟ್ಟಿದಾನೆ; ಕುದುರೆಗೆ, ಕತ್ತೆಗೆ, ಹಾವಿಗೆ, ಚೇಳಿಗೆ, ಹುಳು ವಿಗೆ–ಎಲ್ಲಕ್ಕೂ ಬುದ್ಧಿ ಕೊಟ್ಟಿದಾನೆ. ಎಲ್ಲಿಯೂ ಒಂದುಕಡೆ ಬುದ್ಧಿಯ ಭಂಡಾರವನ್ನು ಇಟ್ಟಿಲ್ಲ. ಇದರಿಂದ ಭಗವಂತ ನಿಶ್ಚಿಂತನಾಗಿ ಕ್ಷೀರಸಾಗರದಲ್ಲಿ ಮಲಗಿ ನಿದ್ರಿಸುತ್ತಿದಾನಂತೆ. ನಮ್ಮ ಮಂತ್ರಿಗಳು ಹೀಗೆ ನಿದ್ರೆಮಾಡಬಹುದೆ ? ಭಗವಂತ ಹೀಗೆ ನಿದ್ದೆ ಮಾಡುತ್ತಿದ್ದರೆ ಅವನು ಅಲ್ಲಿ ಇದಾನೆಂಬುದೇ ತಿಳಿಯು ವುದಿಲ್ಲ. ನಮ್ಮ ಈ ಅಣ್ಣ ತಮ್ಮಂದಿರು ಅವನು ಇಲ್ಲವೇ ಇಲ್ಲ ಎನ್ನುತ್ತಾರೆ; ಅವನು ತನ್ನ ಅಧಿಕಾರ ನಡೆಸನಲ್ಲ ! ತನ್ನನ್ನು ಒಪ್ಪಲಿ ಬಿಡಲಿ, ನಿಶ್ಚಿಂತನಾಗಿ ಮಲಗಿದಾನೆ ದೇವರು ; ಇಷ್ಟು ಕ್ಷಮಾಶೀಲ ಅವನು. ದಿಲ್ಲಿಯ ಜನ ಹೀಗೆ ಮಲಗಿರಬೇಕು. ಅದೇ ನಿಜವಾದ ಸ್ವರಾಜ್ಯ. ದಿಲ್ಲಿ ನಮ್ಮ ಕ್ಷೀರಸಾಗರ, ಅಲ್ಲಿ ನಮ್ಮ ಪ್ರಧಾನಿ ಮಲಗಿದಾನೆ. ಹೀಗಾದಾಗ ನಮ್ಮದು ನಿಜವಾದ ಸ್ವರಾಜ್ಯವೆಂದು ತಿಳಿಯಬೇಕು. ಈಗ ನಮ್ಮ ಪ್ರಧಾನ ಮಂತ್ರಿ ಹದಿನೆಂಟು ಗಂಟೆ ಎಚ್ಚರವಾಗಿರುತ್ತಾರಂತೆ. ಇದೆಂಥ ಸ್ವರಾಜ್ಯ ?

ಮೊದಲು ಲಂಡನ್ನಿನಲ್ಲಿತ್ತು ಅಧಿಕಾರ. ಅಲ್ಲಿಂದ ಪಾರ್ಸೆಲ್ ಮೂಲಕ ದಿಲ್ಲಿಗೆ ಬಂದಿದೆ. ಇದೊಂದು ದೊಡ್ಡ ಅನುಗ್ರಹವೇ. ಆದರೆ ಆ ಪಾರ್ಸೆಲ್ ದಿಲ್ಲಿಯಲ್ಲಿಯೇ ನಿಂತುಹೋಗಿದೆ. ಹಳ್ಳಿಹಳ್ಳಿಗೂ ಅದನ್ನು ತಲಪಿಸಬೇಕು. ಜನರಿಗೆ ನಾವು ಸ್ವರಾಜ್ಯದ ಶಿಕ್ಷಣ ಕೊಡಬೇಕು. ಇಷ್ಟೆಲ್ಲ ಕೆಲಸ ಮಾಡ ಬೇಕು. ಇದರ ಹೆಸರು **ಶಾಸನ-ವಿಭಾಜನ**. ಇವೊತ್ತು ಶಾಸನ ಕೇಂದ್ರೀ

ಎಂದರೆ ಒಂದು ತುಂಡು-ಹಳ್ಳಿಯಲ್ಲಿ. ಮುಂದಿನ ಶಿಕ್ಷಣ ಪಡೆಯಲು ಹಳ್ಳಿಯವರು ಊರು ಬಿಟ್ಟು ಹೊರಗೆ ಹೋಗಬೇಕು. ಇದಕ್ಕೆ ಏನೂ ಅರ್ಥವಿಲ್ಲ. ನನ್ನ ಹಳ್ಳಿ ಯಲ್ಲಿಯೇ ನನಗೆ ಪೂರ್ಣ ಶಿಕ್ಷಣ ಸಿಗಬೇಕು. ನನ್ನ ಹಳ್ಳಿ ಒಂದು ತುಣುಕಲ್ಲ, ಪೂರ್ಣವಾದುದು. 'ಪೂರ್ಣಮದಃ ಪೂರ್ಣಮಿದಂ'—ಅದೂ ಪೂರ್ಣ ಇದೂ ಪೂರ್ಣ. ಆದರೆ ಈ ಜನರು ಇದೂ ತುಣುಕು, ಅದೂ ತುಣುಕು, ಎಲ್ಲಾ ಸೇರಿ ಒಂದು ಪೂರ್ಣವಸ್ತು ಎನ್ನುತ್ತಾರೆ. ನಮ್ಮ ಯೋಜನೆಯಲ್ಲಿ ಹೀಗೆಯೇ ತುಂಡು ತುಂಡು ಜೋಡಿಸಿಪೂರ್ಣವಸ್ತುವನ್ನು ಮಾಡುವ ಮಾತು ಇಲ್ಲ. ರಾಜ್ಯದ ಎಲ್ಲಾ ವಿಭಾಗಗಳೂ ಹಳ್ಳಿಯಲ್ಲಿರಬೇಕು. ಹಳ್ಳಿ ಒಂದು ಪರಿಪೂರ್ಣ ರಾಜ್ಯವಾಗಬೇಕು-ಇದು ನಮ್ಮ ಬಯಕೆ.

ಹೀಗೆ ಚಿಕ್ಕಪುಟ್ಟ ಹಳ್ಳಿಗಳಲ್ಲೂ ರಾಜ್ಯವಾದರೆ, ಹಳ್ಳಿಹಳ್ಳಿಯಲ್ಲೂ ರಾಜ್ಯಗಾರ ಧುರಂಧರರ ಗುಂಪು ಹುಟ್ಟೀತು. ಪ್ರತಿ ಹಳ್ಳಿಯಲ್ಲೂ ಅನುಭವಶಾಲಿ ಜನರು ಆದಾರು. ದಿಲ್ಲಿಯವರಿಗೆ ರಾಜ್ಯನಡೆಸುವುದು ಕಷ್ಟವೆನಿಸಿದಾಗ ನಾಲ್ಕು ಹಳ್ಳಿಗಳಿಗೆ ಹೋಗಿ ಅಲ್ಲಿ ಅವರು ಹೇಗೆ ರಾಜ್ಯನಡೆಸುತ್ತಾರೋ ನೋಡೋಣ ಎನಿಸೀತು. ಏಕೆಂದರೆ, ಆಗ ರಾಜ್ಯಶಾಸ್ತ್ರ-ವಿದ್ಯಾಪಾರಂಗತ ಜನ ಹಳ್ಳಿಹಳ್ಳಿಯಲ್ಲೂ ಇದ್ದಾರು. ಆದುದರಿಂದ ಹಳ್ಳಿಹಳ್ಳಿಯಲ್ಲೂ ವಿದ್ಯಾಪೀಠವಿರಬೇಕು. ಈಗಂತೂ ಹಳ್ಳಿಗಳಲ್ಲಿ ರಾಜ್ಯಶಾಸ್ತ್ರಬಲ್ಲವರು ಯಾರೂ ಇಲ್ಲ. ಜಿಲ್ಲೆಜಿಲ್ಲೆಗಳಲ್ಲೂ ರಾಜ್ಯಶಾಸ್ತ್ರ ಬಲ್ಲವರು ಇಲ್ಲ ಎನ್ನುತ್ತಾರೆ. ಇದೇ ಆಂಧ್ರ ಪ್ರದೇಶದಲ್ಲಿ ರಾಜ್ಯಶಾಸ್ತ್ರವನ್ನು ಬಲ್ಲವರು ಇಬ್ಬರೋ ಮೂವರೋ ಇದ್ದಾರು. ಸ್ವರಾಜ್ಯ ನಡೆಸಲು ಹೀಗೆ ರಾಜ್ಯಶಾಸ್ತ್ರವೇತ್ತರ ಸಂಖ್ಯೆ ಇಷ್ಟು ಕಡಮೆ ಇದ್ದರೆ ಆದೀತೆ? ಆದುದರಿಂದ ಹಳ್ಳಿಹಳ್ಳಿಯಲ್ಲೂ ಬಲ್ಲವರು ಬೇಕು. ಈಗಿನ ಪರಿಸ್ಥಿತಿ ಹೇಗಿದೆ ಎಂದರೆ ನನಗೆ ಪ್ರಧಾನಪದವಿಯಿಂದ ವಿಶ್ರಾಂತಿ ಕೊಡಿ ಎಂದು ಪಂಡಿತ ನೆಹರೂ ಒಂದು ಸಲ ಕೇಳಿದರೆ, ಎಲ್ಲರೂ ಗಾಬರಿಗೊಂಡು ನೀವಿಲ್ಲದಿದ್ದರೆ ನಮ್ಮ ಪಥ ನಡೆಯದಲ್ಲ-ಎನ್ನತೊಡಗಿದರು. ಇದು ಸ್ವರಾಜ್ಯವಲ್ಲ. ಪಂಡಿತ ನೆಹರೂ ನನಗೆ ವಿಶ್ರಾಂತಿಬೇಕು ಎಂದಾಗ ಅಗತ್ಯವಾಗಿ ಆಗಬಹುದು, ಇಲ್ಲಿಯವರೆಗೆ ಅಪಾರ ಸೇವೆ ಮಾಡಿದೀರಿ, ನಿಮಗೆ ಈಗ ವಿಶ್ರಾಂತಿಯ ಅಧಿಕಾರವಿದೆ ಎನ್ನಬೇಕು. ಆಗಲೇ ಸ್ವರಾಜ್ಯ.

## ಸತ್ತೆಯ ವಿಕೇಂದ್ರೀಕರಣ

ದಿಲ್ಲಿಯಲ್ಲಿ ಕೇಂದ್ರೀಕೃತವಾಗಿರುವ ರಾಜ್ಯಸತ್ತೆಯನ್ನು ಹಳ್ಳಿಹಳ್ಳಿಗೂ ಹಂಚಬೇಕು. ನಾನು ಪರಮೇಶ್ವರನ ಭಕ್ತ. ಆದುದರಿಂದ ಈಶ್ವರನ ದೃಷ್ಟಾಂತವನ್ನು ಕೊಡುತ್ತೇನೆ. ಈಶ್ವರ ತನ್ನ ಬುದ್ಧಿಯನ್ನೆಲ್ಲಾ ವೈಕುಂಠ ದಲ್ಲೇ ಇಟ್ಟುಕೊಂಡು, ಯಾವ ಪ್ರಾಣಿಗೂ ಬುದ್ಧಿಯನ್ನು ಕೊಡದಿದ್ದರೆ, ಈ ಲೋಕ ನಡೆಯುತ್ತಿತ್ತೆ ? ಆಗ ಯಾವ ಮನುಷ್ಯನಿಗಾದರೂ ಬುದ್ಧಿ ಬೇಕಾದರೆ ವೈಕುಂಠಕ್ಕೆ ತಂತಿ ಕೊಟ್ಟು ಸ್ವಲ್ಪ ಬುದ್ಧಿಯನ್ನು ತರಿಸಿಕೊಳ್ಳಬೇಕಾಗುತ್ತಿತ್ತು. ಈಗ ನಿಮ್ಮ ಮಂತ್ರಿಗಳು ವಿಮಾನದಲ್ಲಿ ಓಡಾಡಬೇಕಾಗಿದೆ. ಭಗವಂತ ಎಷ್ಟು ಓಡಬೇಕೋ ಹಾಗಾದರೆ ? ಆದರೆ ದೇವರ ಬಹಳ ಚಲೋ ಯೋಚನೆ ಮಾಡಿದಾನೆ ; ಎಲ್ಲರಿಗೂ ಬುದ್ಧಿಯನ್ನು ಹಂಚಿದಾನೆ. ಮನುಷ್ಯನಿಗೆ ಬುದ್ಧಿಯನ್ನು ಕೊಟ್ಟಿದಾನೆ ; ಕುದುರೆಗೆ, ಕತ್ತೆಗೆ, ಹಾವಿಗೆ, ಚೇಳಿಗೆ, ಹುಳು ವಿಗೆ–ಎಲ್ಲಕ್ಕೂ ಬುದ್ಧಿ ಕೊಟ್ಟಿದಾನೆ. ಎಲ್ಲಿಯೂ ಒಂದುಕಡೆ ಬುದ್ಧಿಯ ಭಂಡಾರವನ್ನು ಇಟ್ಟಿಲ್ಲ. ಇದರಿಂದ ಭಗವಂತ ನಿಶ್ಚಿಂತನಾಗಿ ಕ್ಷೀರಸಾಗರದಲ್ಲಿ ಮಲಗಿ ನಿದ್ರಿಸುತ್ತಿದಾನಂತೆ. ನಮ್ಮ ಮಂತ್ರಿಗಳು ಹೀಗೆ ನಿದ್ರೆಮಾಡಬಹುದೆ ? ಭಗವಂತ ಹೀಗೆ ನಿದ್ದೆ ಮಾಡುತ್ತಿದ್ದರೆ ಅವನು ಅಲ್ಲಿ ಇದಾನೆಂಬುದೇ ತಿಳಿಯು ವುದಿಲ್ಲ. ನಮ್ಮ ಈ ಅಣ್ಣ ತಮ್ಮಂದಿರು ಅವನು ಇಲ್ಲವೇ ಇಲ್ಲ ಎನ್ನುತ್ತಾರೆ; ಅವನು ತನ್ನ ಅಧಿಕಾರ ನಡೆಸನಲ್ಲ ! ತನ್ನನ್ನು ಒಪ್ಪಲಿ ಬಿಡಲಿ, ನಿಶ್ಚಿಂತನಾಗಿ ಮಲಗಿದಾನೆ ದೇವರು ; ಇಷ್ಟು ಕ್ಷಮಾಶೀಲ ಅವನು. ದಿಲ್ಲಿಯ ಜನ ಹೀಗೆ ಮಲಗಿರಬೇಕು. ಅದೇ ನಿಜವಾದ ಸ್ವರಾಜ್ಯ. ದಿಲ್ಲಿ ನಮ್ಮ ಕ್ಷೀರಸಾಗರ, ಅಲ್ಲಿ ನಮ್ಮ ಪ್ರಧಾನಿ ಮಲಗಿದಾನೆ. ಹೀಗಾದಾಗ ನಮ್ಮದು ನಿಜವಾದ ಸ್ವರಾಜ್ಯವೆಂದು ತಿಳಿಯಬೇಕು. ಈಗ ನಮ್ಮ ಪ್ರಧಾನ ಮಂತ್ರಿ ಹದಿನೆಂಟು ಗಂಟೆ ಎಚ್ಚರವಾಗಿರುತ್ತಾರಂತೆ. ಇದೆಂಥ ಸ್ವರಾಜ್ಯ ?

ಮೊದಲು ಲಂಡನ್ನಿನಲ್ಲಿತ್ತು ಅಧಿಕಾರ. ಅಲ್ಲಿಂದ ಪಾರ್ಸೆಲ್ ಮೂಲಕ ದಿಲ್ಲಿಗೆ ಬಂದಿದೆ. ಇದೊಂದು ದೊಡ್ಡ ಅನುಗ್ರಹವೇ. ಆದರೆ ಆ ಪಾರ್ಸೆಲ್ ದಿಲ್ಲಿಯಲ್ಲಿಯೇ ನಿಂತುಹೋಗಿದೆ. ಹಳ್ಳಿಹಳ್ಳಿಗೂ ಅದನ್ನು ತಲಪಿಸಬೇಕು. ಜನರಿಗೆ ನಾವು ಸ್ವರಾಜ್ಯದ ಶಿಕ್ಷಣ ಕೊಡಬೇಕು. ಇಷ್ಟೆಲ್ಲ ಕೆಲಸ ಮಾಡ ಬೇಕು. ಇದರ ಹೆಸರು **ಶಾಸನ-ವಿಭಾಜನ**. ಇವೊತ್ತು ಶಾಸನ ಕೇಂದ್ರೀ

ಕರಣವಾಗಿದೆ. ಅದರ ಬದಲು ಶಾಸನವಿಭಾಜನ ಮಾಡಬೇಕು. ಪ್ರತಿ ಹಳ್ಳಿಗೂ ಶಾಸನವನ್ನು, ಅಧಿಕಾರವನ್ನು ಹಂಚಬೇಕು. ಆಮೇಲೆ ಹಳ್ಳಿಯ ಜನರೆಲ್ಲ ರಾಜ್ಯಶಾಸ್ತ್ರವನ್ನು ಬಲ್ಲವರಾದಾಗ, ಹಳ್ಳಿಯಜನ ಜಗಳವನ್ನೇ ಆಡದಾಗ, ಆಗ- ಶಾಸನ ಮುಕ್ತಿಯಾದೀತು, ರಾಮರಾಜ್ಯ ಬಂದೀತು.

ಇದನ್ನೆಲ್ಲ ಮಾಡಬೇಕು. ಅದಕ್ಕಾಗಿ ಭೂದಾನ ಯಜ್ಞ ಮೊದಲಾಯಿತು. ನಿಮ್ಮ ಹಳ್ಳಿಯನ್ನು ಸುಧಾರಿಸಲು ನೀವೇ ಟೊಂಕ ಕಟ್ಟಿ ನಿಲ್ಲಬೇಕು ಎಂದು ನಾನು ಹಳ್ಳಿಯವರಿಗೆ ಹೇಳುತ್ತೇನೆ. ನಿಮ್ಮ ಊರಿನಲ್ಲಿ ಭೂಮಿಹೀನರಿದ್ದರೆ ಅವರಿಗೆ ಹೊಲವನ್ನು ಕೊಡಬೇಕು. ಎಲ್ಲಿಂದ ಕೊಡುತ್ತೀರಿ? ಬೇರೆ ಹಳ್ಳಿಯಿಂದ ಹೊಲವನ್ನು ತರುತ್ತೀರಾ? ನಿಮ್ಮ ಹಳ್ಳಿಯ ಹೊಲದಲ್ಲೇ ಒಂದು ಪಾಲನ್ನು ಕೊಡಬೇಕು. ಆಮೇಲೆ ಹಳ್ಳಿಹಳ್ಳಿಯಲ್ಲೂ ಕೈಗಾರಿಕೆಯನ್ನು ನೆಲೆಗೊಳಿಸಬೇಕು. ಹೊರಗಿನ ಬಟ್ಟೆಯನ್ನು ನಾವು ಕೊಳ್ಳುವುದಿಲ್ಲ, ನಮ್ಮ ಹಳ್ಳಿಯಲ್ಲಿ ಬಟ್ಟೆಯನ್ನು ಮಾಡಿ ಅದನ್ನೇ ಉಡುತ್ತೇವೆ ಎಂದು ನೀವು ನಿಶ್ಚಯ ಮಾಡಬೇಕು. ಹೊರಗಿನ ಬಟ್ಟೆ ಉಡುವವನು ಬೆತ್ತಲೆ ಬುರುಕ ಎನ್ನುತ್ತೇನೆ ನಾನು. ನನ್ನ ಇದಿರಿಗೆ ಕುಳಿತಿರುವವರೆಲ್ಲ ಹೊರಗಿನ ಬಟ್ಟೆ ಉಟ್ಟಿದೀರಿ. ಆದುದರಿಂದ ಇದೆಲ್ಲವೂ ಬೆತ್ತಲೆ-ಬುರುಕರ ಸಭೆ. ಇವರಿಗೆ ಹೊರಗಿನಿಂದ ಬಟ್ಟೆ ಬಾರದಿದ್ದರೆ, ಹರಕು ಚಿಂದಿಗಳನ್ನು ಉಟ್ಟಾರು, ಲಂಗೋಟಿ ಹಾಕಿಯಾರು. ಕಡೆಗೆ ಬೆತ್ತಲೆ ಇದ್ದಾರು. ಏಕೆಂದರೆ, ಬಟ್ಟೆ ಮಾಡಿಕೊಳ್ಳುವ ವಿದ್ಯೆ ಇವರಿಗೆ ಬಾರದಲ್ಲ.

ಇದೆಲ್ಲ ಕೆಲಸ ಸರಕಾರದ ಕಾನೂನಿನಿಂದ ಆಗದು. ಭೂದಾನದ ಕೆಲಸವನ್ನು ವಿನೋಬಾ ಏಕೆ ಮಾಡಬೇಕು. ಸರಕಾರ ತನ್ನ ಭೂಮಿಯನ್ನು ಹಂಚಬಾರದೆ ಎನ್ನುತ್ತಾರೆ ಕೆಲವರು. ಸರಕಾರ ಭೂಮಿಯನ್ನು ಹಂಚಿದರೆ **ಗ್ರಾಮರಾಜ್ಯ**ವಾಗದು, **ದಿಲ್ಲೀರಾಜ್ಯ**ವಾದೀತು. ಲಂಡನ್ ರಾಜ್ಯದ ಬದಲು ಈಗ ದಿಲ್ಲೀ ರಾಜ್ಯ ಬಂದಿದೆ. ದಿಲ್ಲಿರಾಜ್ಯದ ಬದಲು ಹಳ್ಳಿರಾಜ್ಯ ಬರಬೇಕೆಂದು ನಮ್ಮ ಆಸೆ. ನಮಗೆ ಹಸಿವಾದರೆ ನಾವೇ ಉಣ್ಣಬೇಕು, ನಮಗಾಗಿ ಪರರು ಉಣ್ಣಲಾರರು. ಅದೇ ರೀತಿ ನಮ್ಮ ಗ್ರಾಮರಾಜ್ಯಕ್ಕಾಗಿ ನಾವೇ ಭೂದಾನ ಮಾಡಬೇಕು, ಪರರು ಮಾಡಲಾರರು. ಈಗ ನಮ್ಮವರು ದಿಲ್ಲಿಯಲ್ಲಿ ಕುಳಿತು ಯಾವ ಪದಾರ್ಥ ಹೊರಗಿನಿಂದ ನಮ್ಮ ದೇಶಕ್ಕೆ ಬರಬೇಕು. ಯಾವ ಪದಾರ್ಥ ಹೊರಗೆ ಹೋಗಬೇಕು ಎಂದು ಯೋಚಿಸರೆ? ಅದೇ ರೀತಿ

ನಮ್ಮ ಹಳ್ಳಿಗೆ ಹೊರಗಿನಿಂದ ಯಾವ ಪದಾರ್ಥ ಬರಬೇಕು, ಯಾವ ಪದಾರ್ಥ ಹೊರಗೆ ಹೋಗಬೇಕು ಎಂದು ಹಳ್ಳಿಯ ಜನ ಕುಳಿತು ಆಲೋಚಿಸಬೇಕು. ಇವೊತ್ತು ತಮತಮಗೆ ಇಷ್ಟಬಂದಂತೆ ಪ್ರತಿಯೊಬ್ಬರೂ ಯಾವುದನ್ನಾದರೂ ಹೊರಗಿನಿಂದ ತರಿಸಿಕೊಳ್ಳುತ್ತಾರೆ. ಇನ್ನು ಮುಂದೆ ಹೀಗೆ ಆಗಬಾರದು. ಹಳ್ಳಿಯವರೆಲ್ಲರೂ ಒಟ್ಟು ಕಲೆತು ಚರ್ಚೆ ಮಾಡಿ ನಿರ್ಣಯಮಾಡಿಯಾರು. ಬೆಲ್ಲಬೇಕಾದರೆ, ಈ ವರ್ಷ ಹಳ್ಳಿಯಲ್ಲಿ ಬೆಲ್ಲ ಆಗುವುದಿಲ್ಲ, ಆದುದರಿಂದ ಈ ವರ್ಷ ಬೆಲ್ಲವನ್ನು ಕೊಂಡು ತರಬೇಕು ಎಂದು ಹಳ್ಳಿಯವರು ತೀರ್ಮಾನಿಸಿಯಾರು. ಗ್ರಾಮಸ್ಥರು ಪ್ರತಿಯೊಬ್ಬರೂ ಪೇಟೆಗೆ ಹೋಗಿ ಬೆಲ್ಲವನ್ನು ಕೊಳ್ಳರು. ಹಳ್ಳಿಯ ಅಂಗಡಿಯಲ್ಲೇ ಕೊಂಡಾರು. ಒಂದು ವರ್ಷದ ಪೂರ್ತಿ ಹೊರಗಿನಿಂದ ಬೆಲ್ಲವನ್ನು ತಮ್ಮ ಅಂಗಡಿಯಲ್ಲಿ ಕೊಂಡು, ಮುಂದಿನ ವರ್ಷಕ್ಕೆ ಕಬ್ಬನ್ನು ಬೆಳೆದು ಬೆಲ್ಲ ಮಾಡಿಯಾರು. ಹಳ್ಳಿಯ ಅಂಗಡಿಯಲ್ಲಿ ಆ ಬೆಲ್ಲವನ್ನೆ ಇಟ್ಟಾರು, ಅದನ್ನೇ ಕೊಂಡಾರು.

ಹೀಗೆ ಇಡೀ ಹಳ್ಳಿ ಒಂದೇ ಹೃದಯದಿಂದ ಆಲೋಚಿಸೀತು. ಹಳ್ಳಿಯಲ್ಲಿ ಐದುನೂರು ಜನ ಇದ್ದರೆ ಒಂದು ಸಾವಿರ ಕೈಯಾಯಿತು, ಸಾವಿರ ಕಾಲಾಯಿತು, ಐದುನೂರು ಬುದ್ಧಿಯಾಯಿತು; ಆದರೆ ಹೃದಯ ಮಾತ್ರ ಒಂದೇ. ಗೀತೆಯ ಹನ್ನೊಂದನೆಯ ಅಧ್ಯಾಯದಲ್ಲಿ ವಿಶ್ವರೂಪ ದರ್ಶನದ ಮಾತು ಬರುತ್ತದೆ. ಅದರಲ್ಲಿ ಸಾವಿರಾರು ಕೈ, ಸಾವಿರಾರು ಕಾಲು, ಕಣ್ಣು, ಕಿವಿ ಇವೆ. ಆದರೆ ಸಾವಿರ ಹೃದಯ ಇವೆ ಎಂಬ ಮಾತು ಎಲ್ಲೂ ಇಲ್ಲ. ವಿಶ್ವರೂಪದ ಹೃದಯ ಒಂದೇ ಆದೀತು. ಅದೇ ರೀತಿ ಹಳ್ಳಿಯ ಹೃದಯ ಒಂದೇ ಆದೀತು. ಐದು ನೂರು ಬುದ್ಧಿ ಚರ್ಚೆ ಮಾಡಿ ನಿರ್ಣಯ ಮಾಡಿಯಾವು. ಇದು ನಮ್ಮ ಸರ್ವೋದಯ ಯೋಜನೆ.

## ಸರ್ವೋದಯ ಮಾಡುವವರು ಯಾರು ?

ಈಗ ನೀವೇ ಹೇಳಿ, ಸರ್ವೋದಯ ಕೆಲಸವನ್ನು ಯಾರು ಮಾಡಬೇಕು ? ನೀವೋ ದಿಲ್ಲಿಯವರೋ ? ನೀವು ನಿಮ್ಮ ಯೋಜನೆ ಮಾಡಿದರೆ ದಿಲ್ಲಿಯವರು, ರಾಜಧಾನಿಯವರು ನಿಮಗೆ ಸ್ವಲ್ಪ ಸಹಾಯ ಮಾಡಿಯಾರು. ಇದು ಸರಿಯೆ. ಆದರೆ ನೀವೇ ತಾನೆ ನಿಮ್ಮ ಹಳ್ಳಿಗೆ ಯೋಜನೆ ಮಾಡಬೇಕಾದವರು ? ಹಳ್ಳಿಹಳ್ಳಿಗೆ ಹೋಗಿ ವಿನೋಬಾನ ಈ ಮಾತನ್ನು ತಿಳಿಸಿ

ಹೇಳಿದರೆ, ತಿಳಿದುಕೊಳ್ಳುವಷ್ಟು ಬುದ್ಧಿ ಜಾಣ ರೈತರಿಗೆ ಇದೆ. ಆಗ ನಿಮಗೆ ಈ ಒಂದೆಕರೆ ಎರಡೆಕರೆ ದಾನ ಸಿಗದು. ಪ್ರತಿಯೊಂದು ಹಳ್ಳಿಯವರೂ ಬಂದು ನಿಂತು ನಮ್ಮ ಹಳ್ಳಿಯ ಭೂಮಿಹೀನರ ಪ್ರಶ್ನೆಯನ್ನು ಬಿಡಿಸಿದೇವೆ ಎಂದಾರು. ನಮ್ಮ ಹಳ್ಳಿಯಲ್ಲಿ ಹೊಲವಿಲ್ಲದವರಿಗೆ, ಕಡಮೆಯಿದ್ದವರಿಗೆ ಪೂರಾ ಹೊಲವನ್ನು ನಾವು ಕೊಟ್ಟದೇವೆ. ಹೀಗೆ ಸಮಸ್ತರೂ ರುಜುಮಾಡಿ ಕೊಟ್ಟ ದಾನಪತ್ರಗಳು ನಿಮ್ಮ ಭೂದಾನ ಸಮಿತಿಗೆ ಬಂದು ಬಿದ್ದಾವು. ಇನ್ನು ಹಳ್ಳಿಯ ಭೂಮಿಯನ್ನೆಲ್ಲಾ ಹಳ್ಳಿಯ ಸಮಷ್ಟಿ ಸೊತ್ತಾಗಿ ಮಾಡಿಬಿಡಿ. ಈಗ ನಿಮ್ಮ ಹಳ್ಳಿಯಲ್ಲಿ ಹೊಲವಿಲ್ಲದವರು ಯಾರೂ ಇಲ್ಲ. ಇನ್ನು ಹೊಲ ದೊಡೆಯರೂ ಯಾರೂ ಇಲ್ಲದಾಗಬೇಕು. ಇದನ್ನು ಆಲೋಚಿಸಿ. ಒಂದೇ ಸಲಕ್ಕೆ ಈ ಕೆಲಸ ಆಗದೆಂಬುದು ನಮಗೂ ಗೊತ್ತಿದೆ. ಆದುದರಿಂದ ಇನ್ನು ಖಾದಿ ಗ್ರಾಮೋದ್ಯೋಗದ ಕೆಲಸವನ್ನು ಮೊದಲಿಡಿ.

## ಐದು ಲಕ್ಷ ಹಳ್ಳಿಗಳಲ್ಲಿ ಸ್ವರಾಜ್ಯ

ಇದೆಲ್ಲವನ್ನೂ ಮಾಡಲು ಸ್ವಲ್ಪ ಕಾಲ ಬೇಕು. ನಾ ಬಲ್ಲೆ. ಹೆಚ್ಚು ಕಾಲವೇನು ಬೇಡ. ಒಂದು ಹಳ್ಳಿಯಲ್ಲಿ ಒಂದು ವರ್ಷ ಹಿಡಿಸಿದರೆ ಹಿಂದೂ ಸ್ತಾನದ ಐದು ಲಕ್ಷ ಹಳ್ಳಿಗಳಲ್ಲಿ ಎಷ್ಟು ಕಾಲ ಬೇಕು ಎಂದು ತ್ರೈರಾಶಿಕ ಲೆಕ್ಕ ಮಾಡಬೇಡಿ. ನಿಮ್ಮೂರಿನಲ್ಲಿ ಮಾವಿನಕಾಯಿ ಹಣ್ಣಾಗುವಾಗ ಇಡೀ ಹಿಂ ದೂಸ್ತಾನದ ಐದು ಲಕ್ಷ ಹಳ್ಳಿಗಳಲ್ಲೂ ಮಾವಿನಕಾಯಿ ಹಣ್ಣಾಗುತ್ತಿರುತ್ತದೆ. ಆದುದರಿಂದ ನಿಮ್ಮ ಹಳ್ಳಿಯಲ್ಲಿ ಗ್ರಾಮರಾಜ್ಯವನ್ನು ನಿರ್ಮಿಸಲು ಎಷ್ಟು ಕಾಲ ಹಿಡಿಯುತ್ತದೋ ಅಷ್ಟೇ ಕಾಲದಲ್ಲಿ ಇಡೀ ಹಿಂದೂಸ್ತಾನದ ಐದುಲಕ್ಷ ಹಳ್ಳಿ ರಾಮರಾಜ್ಯವಾದೀತು. ಈ ವಿಚಾರವನ್ನು ಹಳ್ಳಿಹಳ್ಳಿಗೂ ಹೋಗಿ ತಿಳಿಸಿದರೆ, ಇವೊತ್ತು ಮಾಡುವಂತೆ ಲಕ್ಷ ಎರಡುಲಕ್ಷ ಎಕರೆ ದಾನಗಳಿಸುವ ದರಿದ್ರಕಲ್ಪನೆ ಮಾಡಲಿಕ್ಕಿಲ್ಲ.

## ಮೂರು ಸೂತ್ರ

ಇವೊತ್ತು ನಿಮ್ಮೆದಿರಿಗೆ ನಾನು ಸೂತ್ರರೂಪವಾಗಿ ಹೇಳಿದೇನೆ. ಮೊದ ಲನೆಯದು—**ಕೇಂದ್ರೀಯ ಸ್ವರಾಜ್ಯ**, ಎರಡನೆಯದು **ವಿಭಾಜಿತ**

**ಸ್ವರಾಜ್ಯ,** ಮೂರನೆಯದು **ರಾಜ್ಯಮುಕ್ತಿ** ಅಥವಾ **ರಾಮರಾಜ್ಯ.** ಇದನ್ನು ರಾಮರಾಜ್ಯವೆನ್ನಬೇಕೇ ಅ-ರಾಜ್ಯ ವೆನ್ನಬೇಕೇ ಎಂದರೆ ಅವರವರ ಇಷ್ಟ. ದೇವರು ಇಲ್ಲವೆನ್ನಬಹುದು, ಅಥವಾ ಹಾಲುಗಡಲಿನಲ್ಲಿ ಮಲಗಿದಾನೆ ಎನ್ನಲೂಬಹುದು. ಆದರೆ ದೇವರು ಹನಿಹನಿ ಬೆವರು ಸುರಿಸಿ ದುಡಿಯುತ್ತಿದಾನೆ ಎನ್ನಲಾರಿರಾ ? ದೇವರು ಇಲ್ಲ; ಅಥವಾ ಇದ್ದರೂ ಏನೂ ಕೆಲಸ ಮಾಡದೆ ಕುಳಿತಿದಾನೆ; ದೇವರು ಎಲ್ಲವನ್ನೂ ಮಾಡುತ್ತಾನೆ, ಎಲ್ಲರ ಮೇಲೂ ಅಧಿಕಾರ ನಡೆಸುತ್ತಾನೆ. ಹೀಗಾಗಬಾರದು. ಈ ತತ್ವಜ್ಞಾನವನ್ನು, ಈ ವಿದ್ಯೆಯನ್ನು ನಮ್ಮ ದೇಶದಲ್ಲಿ ತರಬೇಕಾಗಿದೆ.

## ಪರಸ್ಪರಾವಲಂಬನೆ

ನೀವೆಲ್ಲರೂ ಉತ್ಸಾಹದಿಂದ ಅಣ್ಣತಮ್ಮಂದಿರಾಗಿ ಕೆಲಸಕ್ಕೆ ತೊಡಗಿರಿ. ಇದು ನನ್ನ ಬಯಕೆ. ವಿನೋಬಾಜಿಯ ಯೋಜನೆ ಪರಸ್ಪರಾವಲಂಬನೆಯ ಯೋಜನೆಯಲ್ಲ, ಸ್ವಾವಲಂಬನೆಯದು ಎನ್ನುತ್ತಾರೆ ಕೆಲವರು. ಅಂತೂ ವಿನೋಬಾ ಯೋಜನೆ ಪರಾವಲಂಬನದ್ದಲ್ಲವೆಂಬುದನ್ನು ಅವರೇ ಒಪ್ಪುತ್ತಾರೆ. ಪರಸ್ಪರಾವಲಂಬನೆ ಬೇಕು ಎನ್ನುತ್ತಾರೆ. ನಾನೂ ಪರಸ್ಪರಾವಲಂಬನೆ ಬೇಕೆನ್ನುತ್ತೇನೆ. ಈಗ ವಿನೋಬಾ ಹಾಲು ಕುಡಿದ. ತಾನೇ ಆ ಹಾಲನ್ನು ಹಿಂಡಿದ್ದನೆ ? ಜನ ವಿನೋಬಾಗಾಗಿ ಎಲ್ಲಾ ಏರ್ಪಾಡನ್ನೂ ಮಾಡಿದಾರೆ. ನನ್ನ ಕೈಲಾದ ಸೇವೆಯನ್ನು ನಾನು ಮಾಡುತ್ತೇನೆ. ಜನ ನನಗಾಗಿ ಏರ್ಪಾಟು ಮಾಡಿದಾರೆ. ಆದರೆ ಪರಸ್ಪರಾವಲಂಬನದಲ್ಲಿ ಎರಡು ಬಗೆ. ಕುರುಡ ನೋಡಲಾರ, ನಡೆಯಬಲ್ಲ. ಕುಂಟ ನೋಡಬಲ್ಲ, ನಡೆಯಲಾರ. ಆದುದ ರಿಂದ ಇಬ್ಬರೂ ಪರಸ್ಪರಾವಲಂಬನೆ ಮಾಡುತ್ತಾರೆ, ಸಹಕರಿಸುತ್ತಾರೆ. ಕುಂಟ ಕುರುಡನ ಹೆಗಲಿನ ಮೇಲೆ ಕೂತುಕೊಳ್ಳುತ್ತಾನೆ ಅವನು ನೋಡುತ್ತಾನೆ, ಕುರುಡ ನಡೆಯುತ್ತಾನೆ. ಹೀಗೆ ಸಮಾಜದಲ್ಲಿ ಕೆಲವರನ್ನು ಕುರುಡರಾಗಿ ಕೆಲವ ರನ್ನು ಕುಂಟರಾಗಿ ಮಾಡುತ್ತೀರಾ? ಇವರಿಬ್ಬರೊಳಗೆ ಪರಸ್ಪರಾವಲಂಬನೆ ಆ ಮೇಲೆ. ವಿನೋಬಾಗೂ ಪರಸ್ಪರಾವಲಂಬನೆ ಬೇಕು. ಆದರೆ ಇಬ್ಬರಿಗೂ ಕಣ್ಣಿರಲಿ ಇಬ್ಬರಿಗೂ ಕಾಲಿರಲಿ ಎಂದು ವಿನೋಬಾನ ಇಷ್ಟ. ಇಬ್ಬರೂ ಕೈಕೈ ಕಲೆಸಿ ಜೊತೆಯಲ್ಲಿ ಹೋಗಲಿ. ನನಗೆ **ಸಮರ್ಥರ ಪರಸ್ಪರಾವಲಂಬನೆ** ಬೇಕು.

ಇವರೋ **ಹೆಳವರ** ಅಥವಾ **ಅಸಮರ್ಥರ** ಪರಸ್ಪರಾವಲಂಬನೆ ಬಯಸುತ್ತಾರೆ.

ಎಲ್ಲಾ ಪದಾರ್ಥಗಳೂ ಒಂದು ಹಳ್ಳಿಯಲ್ಲಿ ಉತ್ಪತ್ತಿಯಾಗಲಾರವು. ನಾನೂ ಬಲ್ಲೆ. ಒಂದು ಹಳ್ಳಿ ಇನ್ನೊಂದು ಹಳ್ಳಿಯೊಡನೆ, ಹಳ್ಳಿಗಳು ಪಟ್ಟಣಗಳೊಡನೆ ಸಹಕರಿಸಬೇಕಾಗುತ್ತದೆ. ಆದರೆ ಪಟ್ಟಣಗಳಲ್ಲಿ ಕುಟ್ಟಿಸಿದ ಅಕ್ಕಿ, ಬೀಸಿಸಿದ ಹಿಟ್ಟು, ಮಾಡಿಸಿದ ಸಕ್ಕರೆಗಳನ್ನು ಹಳ್ಳಿಗಳಿಗೆ ತರಬಾರದು. ಈ ಪದಾರ್ಥಗಳು ಹಳ್ಳಿಯಲ್ಲಿಯೇ ಆಗಬೇಕೆಂದು ನಮ್ಮ ಆಸೆ. ಹಳ್ಳಿಗಳಿಗೆ ಕನ್ನಡಕ, ಥರ್ಮಾಮೀಟರ್, ಲೌಡ್ ಸ್ಪೀಕರ್‌ಗಳು ಬೇಕಾದರೆ, ಅವನ್ನು ಪಟ್ಟಣದಿಂದ ತರಬೇಕು. ಇವೊತ್ತು ಹಳ್ಳಿಗಳವರ ಉದ್ಯೋಗವನ್ನು ಪಟ್ಟಣದವರು ಮಾಡುತ್ತಿದಾರೆ. ಹಳ್ಳಿಯಲ್ಲಿ ಕಚ್ಚಾಪದಾರ್ಥ ಉತ್ಪತ್ತಿಯಾಗುತ್ತದೆ. ಅಲ್ಲೇ ಅದನ್ನು ಪೂರ್ಣವಸ್ತುಗಳಾಗಿ ಮಾಡಬಹುದು, ಆದರೆ ಈಗ ಪಟ್ಟಣಗಳಲ್ಲಿ ಯಂತ್ರಗಳ ಮೂಲಕ ಪೂರ್ಣವಸ್ತುಗಳಾಗಿ ಮಾಡುತ್ತಾರೆ. ಇತ್ತ ಪಟ್ಟಣಗಳಿಗೆ ಪರದೇಶದಿಂದ ಬರುವ ವಸ್ತುಗಳನ್ನು ತಡೆಯುವವರೇ ಇಲ್ಲ. ಹಳ್ಳಿಯ ಉದ್ಯೋಗ ಹಳ್ಳಿಯಲ್ಲೇ ನಡೆಯಲಿ, ಪರದೇಶಗಳಿಂದ ಬರುತ್ತಿರುವ ವಸ್ತುಗಳನ್ನು ತಡೆಗಟ್ಟಲು ಅವನ್ನು ಪಟ್ಟಣದಲ್ಲಿ ಮಾಡಲಿ ಎಂದು ನಮ್ಮ ಅಪೇಕ್ಷೆ. ಹಳ್ಳಿಯ ಕೈಗಾರಿಕೆ ಹಾಳಾದರೆ ಹಳ್ಳಿಗಳಿಗೆ ಮಾತ್ರವೇ ಅಲ್ಲ, ಪಟ್ಟಣಗಳಿಗೂ ಸಂಕಟವೊದಗುತ್ತದೆ. ಆಮೇಲೆ ಹಳ್ಳಿಯ ನಿರುದ್ಯೋಗಿಗಳು ಪಟ್ಟಣಗಳ ಮೇಲೆ ದಾಳಿ ಮಾಡಿಯಾರು. ಇತ್ತ ಪರದೇಶಿ ವಸ್ತುಗಳ ಆಕ್ರಮಣವೂ ನಡದೇ ಇದ್ದೀತು. ಹೀಗೆ ಎರಡೂ ದಾಳಿಗಳ ನಡುವೆ ಪಟ್ಟಣಗಳವರು ಹಿಟ್ಟಾಗಿ ಹೋದಾರು. ಆದುದರಿಂದಲೇ ನಮ್ಮ ಯೋಜನೆಯಲ್ಲಿ ಹಳ್ಳಿಪಟ್ಟಣಗಳ ನಡುವೆ ಹಳ್ಳಿಯವರು ತಮ್ಮ ಉದ್ಯೋಗ ನಡೆಸುವ, ಪಟ್ಟಣದವರು ಪರದೇಶದಿಂದ ಬರುವ ವಸ್ತುಗಳನ್ನು ಪಟ್ಟಣದಲ್ಲಿ ಮಾಡುವ ಪರಸ್ಪರ ಸಹಕಾರವಿದ್ದೀತು. ಹೀಗೆ ಪ್ರತಿಯೊಂದು ಹಳ್ಳಿಯೂ ಪೂರ್ಣವಾದೀತು. ಪೂರ್ಣವಾದವುಗಳ ಸಹಕಾರ ನಡೆದೀತು.

**ಕೋಟಪಾಲೆಂ, ಶ್ರೀಕಾಕುಲ, ಆಂಧ್ರ,**

**೯—೮—೫೫**

## ೨

# ಸಮಸ್ತವೂ ಹಳ್ಳಿಯಲ್ಲೇ

ಹಿಂದುಸ್ತಾನದಲ್ಲಿ ಅನೇಕ ವರ್ಷಗಳಿಂದ ಖಾದಿಯ ಕೆಲಸ ನಡೆಯುತ್ತಿದೆ. ೩೬ ವರ್ಷವಾಯಿತು. ಮೊದಲಿನಿಂದ ಇಂದಿನವರೆಗೆ ಈ ಕೆಲಸದ ಪೂರ್ಣ ಪರಿಚಯವಿದೆ ನನಗೆ. ಈ ಕೆಲಸದಲ್ಲಿ–ನೂಲುವುದರಲ್ಲಿ, ನೇಯುವುದರಲ್ಲಿ, ಪ್ರತಿಯೊಂದು ಪ್ರಯೋಗದಲ್ಲೂ–ನನ್ನ ಜೀವನದ ಎಷ್ಟೋ ವರ್ಷ ಕಳೆದಿವೆ. ನಾವೆಲ್ಲರೂ ಈ ಕೆಲಸ ಮಾಡಿದೇವೆ. ನಮ್ಮ ಹುಡುಗರೂ ಜೊತೆಗಾರರೂ ಮಾಡಿದಾರೆ. ಹಳ್ಳಿಗಳಲ್ಲಿ ಬರೀ ಖಾದಿಯೆ ಆಗಲಿ, ಹೊರಗಿನಿಂದ ಬಟ್ಟೆ ಬಾರದಿರಲಿ ಎಂದು ನಾವು ಪ್ರಯತ್ನಿಸಿದೆವು. ಈ ಪ್ರಯೋಗ ಪ್ರತಿಯೊಂದು ಪ್ರಾಂತದಲ್ಲೂ ಹತ್ತಾರು ಹಳ್ಳಿಗಳಲ್ಲಿ ನಡೆದಿದೆ. ಕೆಲವು ಕಾಲ ಇದು ನಡೆಯಿತು. ಆಮೇಲೆ ನಿಂತುಹೋಯಿತು. ಅದಕ್ಕೆ ಬೇಕಾದ ತಳಹದಿಯೆ ಇರಲಿಲ್ಲ. ಮನೆ ಮನೆಯಲ್ಲೂ ದವಸ–ಧಾನ್ಯವನ್ನು ಬೆಳೆಸಿಕೊಳ್ಳುವುದಿಲ್ಲವೆ? ಹಾಗೆ ಮನೆಮನೆಯಲ್ಲೂ ಬಟ್ಟೆಯನ್ನೂ ಮಾಡಿಕೊಳ್ಳಬೇಕು ಎಂದು ದೇಶದ ಜನ ಸಿದ್ಧವಾದರೆ ಆಗ ಇದು ನಡೆದೀತು.

### ಮನೆ ಮನೆಯಲ್ಲೂ ಖಾದಿ

ಈ ಹಳ್ಳಿಯಲ್ಲಿ ಕೆಲವು ಮನೆಗಳವರು ಖಾದಿ ಧಾರಿಗಳಲ್ಲ. ಉಳಿದವರೆಲ್ಲರೂ ಖಾದಿ ಧಾರಿಗಳು ಎನ್ನುತ್ತೀರಿ. ಮುಂದೆ ನಾವು ಕಟ್ಟಬೇಕಾದ ಸಮಾಜದಲ್ಲಿ ಹಳ್ಳಿಯೆಲ್ಲಾ ಒಂದು ಕುಟುಂಬವಾದೀತು. ಇಲ್ಲಿಯವರೆಗೆ ಈ ಕೆಲಸವನ್ನು ಮಾಡಲಾಗಿರಲಿಲ್ಲ. ಒಂದೊಂದಕ್ಕೂ ಒಂದು ಕಾಲವಿದೆ. ದೇವರ ಯೋಜನೆಯೂ ಇದೆ. ನಮ್ಮ ಪ್ರಯತ್ನದಲ್ಲಿ ಎಂದೂ ಲೋಪವಿರಲಿಲ್ಲ. ಇಂದಿನವರೆಗೆ ಸತತವೂ ಪ್ರಯತ್ನ ನಡೆದಿತ್ತು. ಮೂರು ನಾಲ್ಕು ವರ್ಷದಿಂದ ನಾನು ಯೋಚಿಸುತ್ತಿದೇನೆ–ಹಳ್ಳಿ ಹಳ್ಳಿಯಲ್ಲೂ ಮನೆ ಮನೆಯಲ್ಲೂ ಬೇಸಾಯ ಮಾಡುವಂತೆ ಹಳ್ಳಿ ಹಳ್ಳಿಯಲ್ಲಿ ಮನೆ ಮನೆಯಲ್ಲಿ ಖಾದಿ ಹೇಗೆ ಆದೀತು? ಖಾದೀ ಭಂಡಾರದಲ್ಲಿ ಸಿಗುವ ಖಾದಿಯ ಬಗ್ಗೆ ಅಲ್ಲ ನಾನು ಹೇಳುವುದು. ಹಳ್ಳಿಯ ಜನರು ಹೊಲದಲ್ಲಿ ಕೆಲಸಮಾಡಿ ಉಳಿದ ವೇಳೆಯಲ್ಲಿ ಮಾಡಿದ, ಹಳ್ಳಿ ಹಳ್ಳಿಯಲ್ಲೂ ಮನೆ ಮನೆಯಲ್ಲೂ ತಯಾರಾದ ಖಾದಿಯ ಬಗ್ಗೆ ಹೇಳುತ್ತಿದೇನೆ. ಇದೆಲ್ಲವೂ ಆದಾಗ ಹಳ್ಳಿಯಲ್ಲಿ ಸ್ವರಾಜ್ಯ ಮೂಡುತ್ತದೆ.

ಸರಕಾರ ಗಿರಣಿಗಳಿಗೆ ತಡೆಹಾಕಿ ಜನರಿಗೆ ಉತ್ತೇಜನ ಕೊಟ್ಟರೆ ಈ ಕೆಲಸವಾಗುತ್ತದೆ. ಮೊದಲು ಸರಕಾರಕ್ಕೆ ಈ ಕೆಲಸ ಮಾಡಲು ಧೈರ್ಯವಿರಲಿಲ್ಲ. ಜನರಿಗೆ ಈ ಕೆಲಸ ಮಾಡಲು ಇಷ್ಟವಿಲ್ಲ, ಹೇಗೆ ಮಾಡಬೇಕು ಎನ್ನುತ್ತಿದ್ದರು. ಈ ಕೆಲಸದಲ್ಲಿ ನಂಬಿಕೆಯಿಲ್ಲದ ಸರಕಾರಿ ಕೆಲಸಗಾರರು ಹೀಗೆ ವಾದಿಸುತ್ತಿದ್ದರು. ಆದರೆ ಸ್ವರಾಜ್ಯ ಲಭಿಸಿ ಇಷ್ಟು ದಿನದ ಮೇಲೆ ನಿರುದ್ಯೋಗ ಹೆಚ್ಚುತ್ತಲೇ ಇದೆ, ಆದುದರಿಂದ ಖಾದಿಗೆ ಉತ್ತೇಜನ ಕೊಡಬೇಕು ಎಂದು ಸರಕಾರಕ್ಕೆ ತಿಳಿಯಿತು. ಈ ದಾರಿಯಲ್ಲಿ ಸರಕಾರ ಹೆಜ್ಜೆ ಹಾಕಲಿದೆ. ಸಂತೋಷದ ಸಂಗತಿ. ಇದು ಬಹಳ ದೊಡ್ಡ ವಿಷಯ. ಮನೆಯಲ್ಲಿ ಖಾದಿ ಮಾಡಬೇಕು, ಜನರು ಅದನ್ನು ತಮ್ಮ ಬಾಳಿನ ಅಂಗವಾಗಿ ಮಾಡಬೇಕು. ಇದು ಬರೀ ಸರಕಾರದ ಪ್ರಯತ್ನದಿಂದಲೇ ಸಾಧ್ಯವಲ್ಲ. ಪ್ರತಿಯೊಂದು ಮಗುವಿಗೂ ಚೆನ್ನಾಗಿ ಲಾಲನೆ ಪಾಲನೆ ಆಗಬೇಕೆಂದು ಸರಕಾರ ಬಯಸುತ್ತದೆ. ಆದರೆ ತಾಯಿ ತಂದೆಗಳ ಹೊರತು ಸರಕಾರ ಈ ಕೆಲಸವನ್ನು ಮಾಡಲಾರದು. ಹಾಗೆಯೇ ಬಾಳಿನಲ್ಲಿ ಒಂದು ವಿಷಯವನ್ನು ಸೇರಿಸುವುದು, ಒಂದು ನಿಶ್ಚಯ ಮಾಡುವುದು, ಸಂಕಲ್ಪ ಮಾಡುವುದು ಜನರ ಕೆಲಸ. ಆಮೇಲೆ ಆ ಸಂಕಲ್ಪಕ್ಕೆ ಸರಕಾರವೂ ಸ್ವಲ್ಪ ಸಹಾಯಮಾಡೀತು. ಮಾಡಿದರೆ ಒಳಿತು; ಮಾಡಿಯೂ ಮಾಡುತ್ತದೆ. ಮಾಡಲಿಲ್ಲವೆನ್ನಿ, ವಿರೋಧಿಸಿತೆನ್ನಿ, ಆದರೂ ಜನ ಮಾಡಿದ ಸಂಕಲ್ಪದ ಪೂರ್ತಿ ಜನಶಕ್ತಿಯಿಂದ ಆಗಿಯೆ ತೀರುತ್ತದೆ.

ಲೋಕಶಕ್ತಿಯನ್ನುಳಿದು ಸರಕಾರದ್ದು ಸ್ವತಂತ್ರ ಶಕ್ತಿ ಏನೂ ಇಲ್ಲವೆಂದು ಮೊದಲಿನಿಂದಲೂ ಇಂದಿನವರೆಗೂ ನಾ ತಿಳಿದಿದೇನೆ. ಜನತೆ ಧಣಿ, ಸರಕಾರ ಆಳು. ಧಣಿಗಿಂತ ಆಳಿಗೆ ಹೆಚ್ಚು ಶಕ್ತಿಯಿದ್ದೀತೆ? ಸರಕಾರಕ್ಕೆ ಬಹಳ ಶಕ್ತಿಯಿದೆ, ಸರಕಾರ ಕ್ರಾಂತಿಕಾರಿ ಪರಿವರ್ತನೆ ಮಾಡಬಲ್ಲದು ಎಂದು ತಿಳಿಯುವವರು ಧಣಿಗಿಂತ ಆಳಿಗೇ ಹೆಚ್ಚು ಬೆಲೆ ಕೊಡುತ್ತಿದಾರೆ. ಆದರೆ ಹಾಗಿಲ್ಲ. ನಿಮಗೆ ಬಹಳ ಶಕ್ತಿಯಿದೆ. ನಿಮ್ಮ ಆತ್ಮದಲ್ಲಿ ಆ ಶಕ್ತಿಯಿದೆ.

## ಜನಸಂಖ್ಯೆಯ ಬೆದರಿಕೆ

ಹಿಂದುಸ್ತಾನದ ಜನಸಂಖ್ಯೆ ಹೆಚ್ಚು; ಭೂಮಿ ಸಾಲದು; ಭೂಮಿ ಹೆಚ್ಚಾಗುವಂತಿಲ್ಲ. ಆದುದರಿಂದ ಬರೀ ಹೊಲದ ಕೆಲಸದಿಂದಲೇ ಹಳ್ಳಿಯ

ಜನಕ್ಕೆ ಆಶ್ರಯ ಸಿಗದು. ಮತ್ತೊಂದು ಉದ್ಯೋಗದ ಹೊರತು ಬೇರೆ ಆಸರೆಯಿಲ್ಲ. ಈ ಕೆಲಸದಲ್ಲಿ ಯಂತ್ರಯುಗ ಏನೂ ನೆರವು ಕೊಡದು. ಆದರೆ ವಿಜ್ಞಾನ ನೆರವು ಕೊಡಬಲ್ಲದು. ಯಂತ್ರ ಬೇರೆ, ವಿಜ್ಞಾನ ಬೇರೆ. ಯಂತ್ರ ಯುಗದಲ್ಲಿ ಹೊಲದ ಕೆಲಸ ಮೊದಲಿಗಿಂತ ಬಹಳ ಬೇಗ ಆಗಬಹುದು. ಹೊಲದಲ್ಲಿ ಹಾಗೆ ಒಮ್ಮೆ ಯಂತ್ರ ಕಾಲಿಟ್ಟಿತೋ ನಿರುದ್ಯೋಗದ ಸಮಸ್ಯೆ ಬೆಳೆದೀತು, ಕಡಮೆಯಾಗದು. ಯಂತ್ರದಿಂದ ನಿರುದ್ಯೋಗದ ಸಮಸ್ಯೆ ಬಗೆ ಹರಿಯದೆಂಬುದನ್ನು ಅರಿಯಬೇಕು.

ದೇವರು ಪ್ರತಿಯೊಬ್ಬರಿಗೂ ಒಂದು ಬಾಯಿ ಕೊಟ್ಟ, ಜೊತೆಯಲ್ಲಿಯೆ ಎರಡು ಕೈ ಕೊಟ್ಟ. ಆದರೂ ಈ ನಿರುದ್ಯೋಗದ ಸಮಸ್ಯೆಯಿದೆ. ಎರಡು ಬಾಯಿ ಒಂದು ಕೈ ಕೊಟ್ಟಿದ್ದರೆ ಏನು ಪಾಡು ಆಗುತ್ತಿತ್ತೋ ಯೋಚಿಸು ವಂತಿದೆ. ನಮ್ಮ ಮನೆಯಲ್ಲಿ ಐದು ಬಾಯಿ ಇವೆ ಎನ್ನುತ್ತೇವೆ. ಐದು ಬಾಯಿ ಇದ್ದರೆ ಹತ್ತು ಕೈಯೂ ಇವೆಯಲ್ಲ. ಇದನ್ನು ದೊಡ್ಡ ದೊಡ್ಡವರೂ ಅರಿತುಕೊಳ್ಳರು. ಹಿಂದುಸ್ಥಾನದಲ್ಲಿ ಜನಸಂಖ್ಯೆ ಬಹಳ ಹೆಚ್ಚುತ್ತಿದೆ, ಕಡಮೆ ಯಾಗದಿದ್ದರೆ ಹಿಂದೂಸ್ತಾನ ಮುಂಬರಿಯಲಾರದು ಎನ್ನುತ್ತಾರೆ. ಪಾಶ್ಚಾತ್ಯರು ಇಂಥ ವಿಚಾರವನ್ನು ಹೆಚ್ಚಾಗಿ ಹರಡಿಸಾರೆ. ಇಂಗ್ಲೆಂಡಿನಲ್ಲಿ ಜನಸಂಖ್ಯೆ ಹೆಚ್ಚು. ಅದಕ್ಕಿಂತ ಹಿಂದೂಸ್ತಾನದಲ್ಲಿ ಕಡಮೆ. ಆದರೂ ಹಿಂದುಸ್ತಾನ ಬಹಳ ಬಡ ದೇಶ, ಇಂಥ ಬಡದೇಶದಲ್ಲಿ ಜನಸಂಖ್ಯೆ ಹೆಚ್ಚಿದರೆ ಬಹಳ ಭಯಾ ನಕ ಎಂದು ಅವರು ತಿಳಿಯುತ್ತಾರೆ. ಹೀಗೆ ಹಿಂದೂಸ್ತಾನದ ಜನಸಂಖ್ಯೆ ಒಂದು ಬೆದರುಗೊಂಬೆಯಾಗಿದೆ. ಜನರು ಆ ವಿಷಯವಾಗಿ ಚಿಂತೆಮಾಡು ತ್ತಾರೆ, ಮಾತಾಡುತ್ತಾರೆ, ಚರ್ಚೆಗಳನ್ನೂ ಮಾಡುತ್ತಾರೆ.

ಇತ್ತೀಚಿನ ಮಾತು. ನಮ್ಮ ಜೊತೆಗೆ ಯಾತ್ರೆಯಲ್ಲಿ ಒಬ್ಬ ಅಮೆರಿಕನ್ ತಂಗಿಯಿದ್ದಳು. ಐದಾರು ದಿನವಾಯಿತು ಆಕೆ ಹೊರಟು ಹೋಗಿ. ಬೇರೆ ದೇಶದಲ್ಲಿ ಒಂದು ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದಳು. ಈಗ ಅಮೆರಿಕಾಕ್ಕೆ ಹಿಂದಿರುಗಿ ಹೋಗುತ್ತಿದ್ದಳು. ಇಂಥ ಜನ ಹಿಂದುಸ್ತಾನಕ್ಕೆ ಬರುತ್ತಾರೆ. ಈಗಂತೂ ಭೂದಾನದ ಕೆಲಸವನ್ನು ನೋಡಿ ಹೋಗುವುದು ಒಂದು ಫ್ಯಾಷನ್ ಆಗಿದೆ. ಆಕೆಯೂ ಓದಿ–ಕೇಳಿ ಇದ್ದಳು. ಹಿಂದುಸ್ತಾನದಲ್ಲಿ ಘೋರಸಮಸ್ಯೆ ಇವೆ–ಜಾತಿಭೇದ, ಬಡತನ, ಜನಸಂಖ್ಯೆಯ ವೃದ್ಧಿ ಎಂದು. ಹೊರಗಿನಿಂದ

ಇಂಥ ತಂಗಿಯುರು ಬಂದಾಗ ಸ್ವಾಭಾವಿಕವಾಗಿ ಹುಡುಗರು ಮಕ್ಕಳು ಅವರ ಸುತ್ತ ಮುತ್ತಿಕೊಳ್ಳುತ್ತಾರೆ. ಇದನ್ನು ನೋಡಿ ಆಕೆ ಇಲ್ಲಿ ಮಕ್ಕಳು ಹೆಚ್ಚಾಗಿ ದಾರಲ್ಲ, ಹಿಂದುಸ್ತಾನದ ಜನಸಂಖ್ಯೆ ಹೀಗೆ ಹೆಚ್ಚುತ್ತ ಹೋದರೆ ಹೇಗೆ ಎಂದು ಕೇಳಿದಳು. ಈ ತಪ್ಪು ಅಭಿಪ್ರಾಯ ಆಕೆಯ ಮನಸ್ಸಿನಲ್ಲಿ ನಿಂತರೆ ಅಮೆರಿಕಾ ದಲ್ಲಿ ಏನೇನು ಹೇಳಿಯಾಳೋ ಎನಿಸಿತು ನನಗೆ.

ನಾವು ಯಾವ ಹಳ್ಳಿಗೆ ಹೋಗುತ್ತೇವೋ ಅಲ್ಲಿನ ಸಂಗತಿ, ಅಂಕಿ ಅಂಶ ಗಳನ್ನೆಲ್ಲಾ ಬರೆದು ನಮ್ಮಲ್ಲಿಟ್ಟುಕೊಳ್ಳುತ್ತೇವೆ. ಹತ್ತಾರು ಹಳ್ಳಿಗಳ ವಿಷಯ ವನ್ನು ಈಕೆಗೆ ತಿಳಿಯಪಡಿಸಿದೆವು. ಅದರಲ್ಲಿ ಕಂಡುದು–ಒಂದೆರಡು ಮನೆಗೆ ಒಂದೇ ಮಗು, ಅದೂ ಇಲ್ಲ. ಇಷ್ಟು ಕಡಮೆ ಮಕ್ಕಳಾದರೆ ಕೆಲಸ ನಡೆದೀತೆ? ಈ ಪ್ರಶ್ನೆ ಮುಂದೆ ಬಂದು ನಿಂತಿತು. ಅಭ್ಯಾಸ ಮಾಡಬೇಕಾದ ವಿಷಯ ಇದು. ಸಾಧಾರಣವಾಗಿ ಮನೆಗೊಬ್ಬ ಗಂಡಸು, ಒಂದೂಕಾಲು ಹೆಂಗಸು, ಒಂದೋ ಒಂದೂ ಕಾಲೋ ಮಗು–ಹೀಗೆ ಸರಾಸರಿ ಲೆಕ್ಕ. ಮನೆಯಲ್ಲಿ ಒಟ್ಟು ಮೂರೂವರೆ ಜನ. ಹಿಂದುಸ್ತಾನದಲ್ಲಿ ಸರಾಸರಿ ಮನೆಗೆ ಐದು ಜನ. ಇಲ್ಲಿ ಮೂರೂವರೆ, ಆದುದರಿಂದ ಸಂತಾನದ ಸಮಸ್ಯೆಯೇ ಇಲ್ಲ. ಮನೆಯಲ್ಲಿ ಐದು ಜನರಿರುವ ಕಡೆಯೂ ಸಂತಾನದ ಸಮಸ್ಯೆಯಿಲ್ಲ. ಅಲ್ಲದೆ ಪ್ರತಿಯೊಬ್ಬ ಮನುಷ್ಯನಿಗೂ ಒಂದು ಬಾಯಿ, ಎರಡು ಕೈ ಇರುವವರೆಗೆ ಜನಸಂಖ್ಯೆಯ ಪ್ರಶ್ನೆಯೇ ಹುಟ್ಟುವುದಿಲ್ಲ.

ಜನಸಂಖ್ಯೆ ಇಷ್ಟು ಹೆಚ್ಚಿತಲ್ಲ, ಇದು ಬಹಳ ಭಯಾನಕ ಎಂದು ರಾಷ್ಟ್ರದ ನಾಯಕರಿಗೆ ಬಹಳ ಚಿಂತೆ. ಸೇನೆಯಲ್ಲಿ ಸಂಖ್ಯೆ ಹೆಚ್ಚಾದರೆ ಸೇನಾ ಪತಿಗೆ ಹಿಗ್ಗು. ಇಷ್ಟು ಜನ ಸಿಪಾಯಿಗಳಿದಾರಲ್ಲ ಎಂದು ಅವನಿಗೆ ದುಃಖ ವಾಗದು. ಆದರೆ ಈ ದಡ್ಡರು ನಮ್ಮ ದೇಶದಲ್ಲಿ ಜನಸಂಖ್ಯೆ ಹೆಚ್ಚಾಯಿತೆಂದು ಸಂಕಟಪಡುತ್ತಾರೆ. ನೂರು ಸಾವಿರ ಸಲ ಹೇಳಿದೇನೆ, ಈಗಲೂ ಮತ್ತೆ ಹೇಳುತ್ತೇನೆ, ಭೂಮಿಗೆ ಪಾಪದ ಭಾರವೇ ವಿನಾ ಧರ್ಮದ ಸಂತಾನ ಭಾರವಲ್ಲ. ಪಾಪದಿಂದಲೂ ಮಕ್ಕಳಾಗಬಹುದು. ಪುಣ್ಯದಿಂದಲೂ ಆಗಬಹುದು. ಮಕ್ಕ ಳಾಗದಂತೆ ಪಾಪದಿಂದಲೂ ತಡೆಯಬಹುದು, ಪುಣ್ಯದಿಂದಲೂ ತಡೆಯಬಹುದು. ಆದರೆ ಪಾಪದ ಕೆಲಸ ಭೂಮಿಗೆ ಭಾರ.

ಭೂಮಿಯಲ್ಲಿ ಬೆಳೆಯುವ ಪೈರಿಗೆ ಪೋಷಣೆ ಭೂಮಿಯೊಳಗೇ ಇದೆ.

ಬೆಳೆದ ಪೈರು ಮತ್ತೆ ಭೂಮಿಗೆ ಸಿಗಬೇಕು. ಹಾಗಾದರೆ ಪೈರು ಭೂಮಿಗೆ ಭಾರವಲ್ಲ. ಮಲ-ಮೂತ್ರಗಳ ಉಪಯೋಗ ಸರಿಯಾಗಿ ಆಗಬೇಕು. ಗೊಬ್ಬರದ ರೂಪದಿಂದ ಮತ್ತೆ ಅದು ಭೂಮಿಗೆ ಸಿಗಬಲ್ಲದು. ಪ್ರಾಣಿಗಳ ಮೂಳೆ ಮುಂತಾದುವು ಹೊಲಕ್ಕೆ ಸಿಗಬೇಕು. ಅಡವಿಯ ಎಲೆ ಹಾಗೇ ಹಾರಿ ಹೋಗುತ್ತವೆ. ಅದನ್ನು ಸರಿಯಾಗಿ ಉಪಯೋಗಿಸಬೇಕು. ಹೀಗೆ ಭೂಮಿಗೆ ಎಲ್ಲ ಪದಾರ್ಥವೂ ಹಿಂದಿರುಗಿ ದೊರೆತರೆ, ನಾವೆಲ್ಲರೂ ನಮ್ಮೆಲ್ಲ ಕೈಗಳಿಂದಲೂ ಕೆಲಸ ಮಾಡಿದರೆ, ಭೂಮಾತೆಗೆ ಜನಸಂಖ್ಯೆ ಭಾರವಾಗದು. ನಿಮಗೆ ಬೇಕಾದ ವಸ್ತುಗಳನ್ನೆಲ್ಲಾ ನೀವೇ ಮಾಡಿಕೊಳ್ಳುವ ವ್ರತ ತೊಡುವವರೆಗೆ ಯಾವ ಸರಕಾರವೂ ನಿಮಗಾಗಿ ಯಾವ ಯೋಜನೆಯನ್ನೂ ಮಾಡಲಾರದು.

ಹಳ್ಳಿಯ ಜನ ಸೀತಾ-ರಾಮ ಸೀತಾ-ರಾಮ ಎಂದಾಗ ಹಳ್ಳಿ ಸುಖ ಗೊಂಡೀತು. ಬೇಸಾಯ ಸೀತೆ, ಗ್ರಾಮೋದ್ಯೋಗ ರಾಮ. ಎಲ್ಲರೂ ಕಲೆ ಮೆಲೆತು ಕೂಡಿ ಬೇಸಾಯ ಮಾಡಬೇಕು. ಹೊಲ ಎಲ್ಲರದೂ. ಮಕ್ಕಳು ತಾಯಿಗೆ ಸೇವಕರು, ಒಡೆಯರಲ್ಲ. ನಾವು ಭೂಮಾತೆಯ ಮಕ್ಕಳು, ಒಡೆಯ ರಲ್ಲ. ಒಬ್ಬೊಬ್ಬರೇ ನಾವು ಒಡೆಯರಲ್ಲ. ಎಲ್ಲರೂ ಒಟ್ಟು ಸೇರಿ ಒಡೆಯರು ಎನ್ನುತ್ತಾರೆ ಕೆಲವರು. ಒಂಟಿ ಮಗನು ತಾಯಿಗೆ ಒಡೆಯನಲ್ಲ, ಹತ್ತು ಜನ ಮಕ್ಕಳು ಸೇರಿದರೂ ಒಡೆಯರಲ್ಲ. ಆದುದರಿಂದ ಭೂಮಿಯ ಒಡೆಯ ಭಗವಂತ, ಸೇವೆಮಾಡುವ ಅಧಿಕಾರವೇ ಅಲ್ಲ, ಕರ್ತವ್ಯವೂ ನಮ್ಮೆಲ್ಲರದು.

ಹೊಲವನ್ನು ತುಂಡುಮಾಡಬಾರದು. ಎಷ್ಟು ಜನಕ್ಕೆ ಕೈತುಂಬಾ ಹೊಲವನ್ನು ಕೊಡಬಹುದೋ ಅಷ್ಟೇ ಜನಕ್ಕೆ ಹೊಲ ಕೊಡಿ. ಉಳಿದವರಿಗೆ ಬೇರೆ ಕಸಬನ್ನು ಕೊಡಿ ಎನ್ನುತ್ತಾರೆ ಇವರು. ಗ್ರಾಮೋದ್ಯೋಗ ರಾಮ, ಬೇಸಾಯ ಸೀತೆ ಎಂದೆ ನಾನು. ಎರಡೂ ಸೇರಿ ಕಲ್ಯಾಣ. ಗ್ರಾಮೋದ್ಯೋಗ ಗಳು ಅತ್ಯಂತ ಆವಶ್ಯಕ. ಅವಿಲ್ಲದೆ ಬೇಸಾಯ ಪೂರ್ಣವಾಗದು, ಗ್ರಾಮ ಜೀವನ ಸ್ವಾವಲಂಬಿಯಾಗದು, ಗ್ರಾಮರಾಜ್ಯ ಸ್ಥಾಪನೆಯಾಗದು. ರಾಮ ಅಯೋಧ್ಯೆಯಲ್ಲಿರಲಿ, ಸೀತೆ ಮಥುರಾದಲ್ಲಿರಲಿ-ಇಂಥ ಹಂಚಿಕೆಯನ್ನು ಮಾಡ ಲಾದೀತೆ? ಇಬ್ಬರೂ ಒಟ್ಟಿಗೆ ಇರಬೇಕು, ಹಳ್ಳಿಯಲ್ಲಿ ಕೆಲವರಿಗೆ ನೀರು, ಕೆಲವರಿಗೆ ಅನ್ನ, ಕೆಲವರಿಗೆ ಹಾಲು; ನೀರಿದ್ದವರಿಗೆ ಅನ್ನವಿಲ್ಲ, ಅನ್ನವಿದ್ದವ ನಿಗೆ ನೀರಿಲ್ಲ, ಇವೆರಡೂ ಇದ್ದವನಿಗೆ ಹಾಲಿಲ್ಲ; ಹೀಗೆ ಸಾಧ್ಯವೇ? ಪ್ರತಿ

ರೊಬ್ಬನಿಗೂ ನೀರು ಅನ್ನ ಹಾಲು ಎಲ್ಲವೂ ಸಿಗಬೇಕು. ಮೂರೂ ಎಲ್ಲರಿಗೂ ಸಿಗಬೇಕು. ಹೊಲವನ್ನು ಉಳುವ, ಅದರ ಸೇವೆ ಮಾಡುವ, ಧರ್ಮಪಾಲನೆ ಮಾಡುವ ಅವಕಾಶ ಪ್ರತಿಯೊಬ್ಬನಿಗೂ ಸಿಗಬೇಕು; ಅವನ ಪಾಲಿಗೆ ಕಾಲು ಎಕರೆ ನೆಲ ಬಂದರೂ ಚಿಂತೆಯಿಲ್ಲ. ಯಾರಿಗೆ ಎಷ್ಟು ಹೊಲ ಸಿಗಬೇಕೆಂಬುದಲ್ಲ ಪ್ರಶ್ನೆ. ಪ್ರತಿಯೊಬ್ಬನಿಗೂ ಹೊಲ ಸಿಗಬೇಕು, ಅದರ ಸೇವೆಯನ್ನು ಅವನು ಮಾಡಬೇಕು.

## ಭೂ ಸೇವೆಯ ಅಧಿಕಾರ

ನಮ್ಮ ದೇಶದ ಪ್ರಧಾನಿ ಮೂರು ನಾಲ್ಕು ಗಂಟೆ ಬೇಸಾಯ ಮಾಡಿ, ಉಳಿದ ವೇಳೆಯಲ್ಲಿ ತಾನು ವಹಿಸಿಕೊಂಡ ಕೆಲಸವನ್ನು ಮಾಡಲಿ. ಇದು ನಮ್ಮ ಕಟ್ಟಕಡೆಯ ಗುರಿ. ಇದರಿಂದ ದೇಶದ ಪವಿತ್ರತೆ, ಆರೋಗ್ಯ ಹೆಚ್ಚೀತು. ಮೇಲು-ಕೀಳಿನ ಭಾವ ಅಳಿದುಹೋದೀತು. ಭೂಮಿಗೆ ಅನೇಕ ಸೇವಕರು ದೊರೆತಾರು. ಎಲ್ಲರ ಬುದ್ಧಿವಂತಿಕೆಯ ಲಾಭವೂ ಸಿಕ್ಕೀತು. ಎಲ್ಲರಿಗೂ ಸಮಾನ ಧರ್ಮ-ಸಂಸ್ಕೃತಿ ಲಭಿಸೀತು. ನೀವು ಬೇಸಾಯಮಾಡಿ ಎಂದು ಕೆಲವರಿಗೆ, ನೀವು ಬೇರೆ ಕೆಲಸಮಾಡಿ ಎಂದು ಇನ್ನು ಕೆಲವರಿಗೆ ಹೇಳುವುದು ಅನ್ಯಾಯವಾದೀತು. ನಾನು ಅಭ್ಯಾಸಕ್ಕಾಗಿ ಎಂಟೆಂಟು ಗಂಟೆ ನೇಯ್ಗೆ, ಎಂಟೆಂಟು ಗಂಟೆ ನೂಲುವುದು, ಎಂಟೆಂಟು ಗಂಟೆ ಬೇರೆ ಕೆಲಸ ಮಾಡಿದೇನೆ. ಇವೊತ್ತು ನೀನು ಎಂಟು ಗಂಟೆ ನೇಯ್ಗೆ ಕೆಲಸ ಮಾಡೆಂದು ಯಾರಾದರೂ ನನ್ನನ್ನು ಬಲವಂತಮಾಡಿದರೆ ಒಲ್ಲೆನೆಂದು ತಿರಸ್ಕರಿಸುತ್ತೇನೆ. ಹಾಗೆ ಒಂದು ಕೊಠಡಿಯಲ್ಲಿ ಕಟ್ಟಿಹಾಕಿಕೊಂಡು, ಕೈಗೆ ಏನೂ ವ್ಯಾಯಾಮವಿಲ್ಲದೆ, ಸೊಂಟ ಮುರಿಯುವ ಹಾಗೆ ಕೂತಿರಲು ನನಗೆ ಇಷ್ಟವಿಲ್ಲ ಎನ್ನುತ್ತೇನೆ. ನಾನದಕ್ಕೆ ಸಿದ್ಧನಿಲ್ಲ. ನನಗೆ ಆಕಾಶ ಸೇವನೆಗೆ ನಾಲ್ಕುಗಂಟೆ ಸಿಗಬೇಕು, ಒಳ್ಳೆಯ ಗಾಳಿ ಬೇಕು, ಸೂರ್ಯನ ಬೆಳಕು ಬೇಕು. ಭೂಸೇವೆ ಮಾಡುವ ಅವಕಾಶ ಬೇಕು, ಇದು ನನ್ನ ಹಕ್ಕು.

ಇದರಿಂದ ಬೆಳೆ ಕಡಿಮೆಯಾಗುತ್ತದೆಂಬುದನ್ನು ನಾನು ಒಪ್ಪುವುದಿಲ್ಲ. ಕಡಮೆಯಾದರೂ, ಕೆಲವರು ಬೇಸಾಯಮಾಡಿ ಕೆಲವರು ಮಾಡಬೇಡಿ ಎನ್ನಲಾರೆ. ವಿಚಾರ ಸ್ವಾತಂತ್ರ್ಯ ಭಾಷಣಸ್ವಾತಂತ್ರ್ಯಗಳನ್ನು ಒಂದು ಹಕ್ಕು ಎಂದು ಒಪ್ಪಿಲ್ಲವೆ? ಹಾಗೇ ಹಿಟ್ಟು ತಿನ್ನುವುದೂ ಒಂದು ಹಕ್ಕು. ಕೆಲವರು ಉಪ್ಪಿನದೂ

ಒಂದುಹಕ್ಕೆಂದು ಒಪ್ಪಿದಾರೆ. ಅದೇ ರೀತಿ ಮನುಷ್ಯನಿಗೆ ಹೊಲದಲ್ಲಿ ಚಲೋ ವ್ಯಾಯಾಮ ಸಿಗಬೇಕು, ಭೂಸೇವೆ ಮಾಡುವ ಅವಕಾಶ ದೊರೆಯಬೇಕು— ಇದು ಮನುಷ್ಯಮಾತ್ರನ ಅಧಿಕಾರ. ಅದರಲ್ಲಿ ಯಾವ ಆರ್ಥಿಕ ಯೋಜನೆಯೂ ಅಡ್ಡಗೈ ಹಾಕಲಾಗದು. ಅಂಥ ಯೋಜನೆಯನ್ನು ಯೋಚಿಸಲಿಕ್ಕೂ ನಾನು ಸಿದ್ಧನಿಲ್ಲ. ಇದು ಪಾರಮಾರ್ಥಿಕ ಹಕ್ಕು, ಅಧಿಕಾರ. ಕೆಲವರು ೨೪ ಗಂಟೆ ಮಲಗಲಿ, ಕೆಲವರು ೨೪ ಗಂಟೆ ಕೆಲಸ ಮಾಡಲಿ–ಇದರಿಂದ ಬಹಳ ಆರ್ಥಿಕ ಲಾಭವಾಗುತ್ತದೆ ಎಂದು ಯಾರಾದರೂ ಒಂದು ಯೋಜನೆಯನ್ನು ತಂದರೆ ಅದನ್ನು ಯಾರು ಒಪ್ಪುತ್ತಾರೆ?

ನಾನಂತೂ ರಾತ್ರಿ ಹೊತ್ತು ಸ್ಟೇಷನಿನಲ್ಲಿ ಕೆಲಸಮಾಡುವುದಿಲ್ಲ ಎನ್ನಿ ಎಂದು ಹೇಳುತ್ತೇನೆ. ರೈಲು ಹಗಲು ಹೊತ್ತು ಓಡಲಿ. ಯಾರಾದರೂ ಕಾಯಿಲೆ ಬಿದ್ದರೆ, ಎಲ್ಲಾದರೂ ಆಪತ್ತು ಇದ್ದರೆ, ಅಂಥ ಪ್ರಸಂಗದಲ್ಲಿ ರಾತ್ರಿ ಕೆಲಸ ಮಾಡೋಣ. ಆದರೆ ಬರೀ ನೌಕರಿಗಾಗಿ ರಾತ್ರಿ ಕೆಲಸ ಮಾಡುವುದಿಲ್ಲ ವೆಂದು ಇಡೀ ಮಾನವ ಸಮಾಜವೇ ನಿರಾಕರಿಸಬೇಕು. ರೈಲು ಹಗಲು ಹೊತ್ತೇ ಓಡಿದರೆ ರೈಲಿನ ಅವಸ್ಥೆಯೋ? ಎಲ್ಲಿ ಸಂಜೆಯಾದರೆ ಅಲ್ಲಿ ರೈಲು ನಿಲ್ಲಬೇಕು. ನಾನು ಹೇಳುವ ಮಾತು ಬಹಳ ವಿಚಿತ್ರವಾಗಿದೆ. ಆದರೆ ಆತ್ಮದ ದೃಷ್ಟಿಯಿಂದ ನೋಡುವವನು ಯೋಚಿಸುವ ರೀತಿಯೇ ಬೇರೆ. ಅಂತೇ ನಮ್ಮದೂ ಒಂದು ವಿಶಿಷ್ಟ ಪ್ರಕಾರದ ಅರ್ಥಶಾಸ್ತ್ರ ಇದೆ.

ಆದುದರಿಂದ ನಮ್ಮ ಗ್ರಾಮರಚನೆಯಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಬೇಸಾಯ ಮಾಡುವ ಹಕ್ಕು ಸಿಗುತ್ತದೆ; ಉಳಿದ ಹೊತ್ತಿನಲ್ಲಿ ಮಾಡಲು ಬೇರೆ ಕೆಲಸ ಸಿಗುತ್ತದೆ. ನಿನಗೆ ಐದುಸಾವಿರ ರೂಪಾಯಿ ಸಂಬಳ ಕೊಡುತ್ತೇವೆ, ನೀನು ಪ್ರೊಫೆಸರ್ ಕೆಲಸ ಮಾಡು, ದಿನಕ್ಕೆ ಆರು ಗಂಟೆ ಪಾಠ ಹೇಳಬೇಕು, ಆದರೆ ಬೇಸಾಯಮಾಡಲು ನಿನಗೆ ಅವಕಾಶವಿಲ್ಲ ಎಂದು ಯಾರಾದರೂ ನನಗೆ ಹೇಳಿದರೆ ನಾನು ಒಪ್ಪುವುದಿಲ್ಲ. ನಾನು ನಾಲ್ಕು ಗಂಟೆ ಬೇಸಾಯಮಾಡ ಬೇಕು, ಉಳಿದ ಹೊತ್ತಿನಲ್ಲಿ ಶಿಕ್ಷಕನ ಕೆಲಸ ಮಾಡುತ್ತೇನೆ ಎನ್ನುತ್ತೇನೆ ನಾನು. ಅದಕ್ಕೆ ನನಗೇನು ಹಣ ಬೇಡ. ಹೊಲದಲ್ಲಿ ಕೆಲಸಮಾಡಿ ಏನು ಬಂದರೆ ಅದೇ ನನಗೆ ಸಾಕು. ನನಗೆ ನಿಮ್ಮ ಹಣದ ಗುಡ್ಡೆಯೂ ಬೇಡ. ಶಿಕ್ಷಕತನಕ್ಕೆ ಕೂಲಿಯೂ ಬೇಡ. ಎಲ್ಲರೂ ಹೊಲದಲ್ಲಿ ಕೆಲಸಮಾಡಲಿ, ಒಳ್ಳೆಯ

ಪ್ರೊಫೆಸರ್ ಆಗುತ್ತಾರೆ, ಒಳ್ಳೆಯ ವ್ಯಾಪಾರಿಯಾಗುತ್ತಾರೆ, ಒಳ್ಳೆಯ ವಕೀಲರಾಗುತ್ತಾರೆ. ಎಲ್ಲವೂ ಒಳ್ಳೆಯದೇ ಆದೀತು. ಈ ಸರ್ವೋದಯ ದೃಷ್ಟಿಯಿಂದ ಸರ್ವೋದಯ ವಿಚಾರದಿಂದ ಇಡೀ ಹಳ್ಳಿ ಸ್ವಾವಲಂಬಿಯಾಗುವುದಷ್ಟೇ ಅಲ್ಲ, ಪೂರ್ಣ ವಿಕಾಸಗೊಂಡೀತು. ಎಂದರೆ, ಪ್ರತಿಯೊಂದು ಹಳ್ಳಿಯಲ್ಲಿ ಮಾನವತೆಯ ಪೂರ್ಣ ವಿಕಾಸವಾದೀತು ; ಆಗಿಯೂ ಪರಸ್ಪರ ಸಹಕಾರವಿದ್ದೀತು. ನಮಗೆ ಪೂರ್ಣಗಳ ಸಹಕಾರ ಬೇಕು, ಅಪೂರ್ಣಗಳ ಸಹಕಾರವಲ್ಲ. ಈ ಪೂರ್ಣ ವಿಕಾಸದ ಅವಕಾಶ ಗ್ರಾಮೋದ್ಯೋಗ–ಬೇಸಾಯಗಳು ಸೇರಿದಾಗಲೇ ಸಂಭವ.

## ಎಲ್ಲರಿಗೂ ವಿದ್ಯಾಭ್ಯಾಸ

ಮೂರನೆಯ ಮಾತು ಹೇಳುತ್ತೇನೆ, ವಿದ್ಯಾಭ್ಯಾಸದ್ದು. ಬ್ರಾಹ್ಮಣನೊಬ್ಬನೇ ವಿದ್ಯೆ ಕಲಿತು ಉಳಿದವರೆಲ್ಲ ಅವನ ಜ್ಞಾನವನ್ನು ಅವಲಂಬಿಸಿ ಕೂಡುವಂತಿಲ್ಲ. ಎಲ್ಲರಿಗೂ ಜ್ಞಾನದೂಟ ಸಿಗಬೇಕು. ಬೇಸಾಯ ಮಾಡುವ ಅವಕಾಶ, ಬುದ್ಧಿ–ಹೃದಯಗಳ ವಿಕಾಸದ ಅವಕಾಶ– ಈ ಮೂರೂ ಪ್ರತಿಯೊಂದು ಮನೆಯಲ್ಲೂ ಪ್ರತಿ ಕುಟುಂಬದಲ್ಲೂ ಎಲ್ಲರಿಗೂ ಸಿಗಬೇಕು. ಆಗ ಹಳ್ಳಿಹಳ್ಳಿಯಲ್ಲೂ ಆನಂದ ಹರಿದೀತು. ನೀವೆಲ್ಲರೂ ಇದನ್ನು ಚೆನ್ನಾಗಿ ಅರಿತುಕೊಂಡು ಒಂದಾಗಿ ಸಂಕಲ್ಪ ಮಾಡಿದಾಗ ಇದು ಆದೀತು. ಆದುದರಿಂದ ನೀವೆಲ್ಲರೂ ಒಂದು ಕುಟುಂಬವಾಗಿ. ಹೊಲ ಸಮಸ್ತರದಾಗಲಿ. ಇರುವ ಮಕ್ಕಳೆಲ್ಲ ಹಳ್ಳಿಯ ಮಕ್ಕಳು, ಬೇರೆ ಬೇರೆ ಮನೆಯವರಲ್ಲ ಎನ್ನಿ. ಎಲ್ಲರಿಗೂ ವಿದ್ಯಾಭ್ಯಾಸ ಸಿಗುವಂತೆ ಒಳ್ಳೆಯ ಯೋಜನೆಮಾಡಬೇಕು. ನಮಗೆ ಬೇಕಾದ ವಸ್ತುಗಳನ್ನೆಲ್ಲ ನಾವೇ ನಮ್ಮ ಕೈಗಳಿಂದ ಮಾಡಿಕೊಳ್ಳುತ್ತೇವೆ, ಹೊರಗಿನಿಂದ ತರಿಸುವುದಿಲ್ಲ. ಹಳ್ಳಿಯಲ್ಲೇ ಕಚ್ಚಾ ಪದಾರ್ಥವನ್ನು ಪೂರ್ಣ ವಸ್ತುವಾಗಿ ಮಾಡುತ್ತೇವೆ ಎನ್ನಿ.

## ವಸ್ತ್ರ ಸ್ವಾವಲಂಬನದ ಸಂಕಲ್ಪ

ಈ ಎಲ್ಲ ಆವಶ್ಯಕತೆಗಳಲ್ಲಿ ಮೇರುಮಣಿ–ಬಟ್ಟೆ. ಮೊದಲು ಅನ್ನ, ಎರಡನೆಯದು ಬಟ್ಟೆ ಎಂದು ಲೋಕರೂಢಿ. ಆದರೆ ಮಾನವ ಸಂಸ್ಕೃತಿ ಬೆಳೆದಿರುವ ರೀತಿಯಲ್ಲಿ ಬಟ್ಟೆಯೇ ಮೊದಲು, ಅನ್ನ ಆಮೇಲೆ ಎನ್ನುವಂತಿದೆ.

ನಾಲ್ಕು ದಿನ ಅನ್ನವಿಲ್ಲದೆ ಇದ್ದೇನು, ನಿಮ್ಮಿಂದಿರಿಗೆ ಅರ್ಧಗಂಟೆ ಬೆತ್ತಲೆಯಿರಲಾರೆ. ಆದುದರಿಂದ ಬಟ್ಟೆ ಸಾಂಸ್ಕೃತಿಕ ಆವಶ್ಯಕತೆಯೆಂದು ಅರಿಯಿರಿ. ಚಳಿಗೆ ಸೆಟೆಯದೆ, ಬಿಸಿಲಿಗೆ ಸುಡದೆ ಇರಲು ಬಟ್ಟೆ ಆಗತ್ಯ ಎಂದರೆ ಅದು ಎರಡನೆಯ ಸ್ಥಾನ. ಆಗ ಅನ್ನಕ್ಕೆ ಮೊದಲನೆ ಸ್ಥಾನ. ಆದರೆ ಹೆಣಕ್ಕೂ ಬಟ್ಟೆ ಬೇಕಲ್ಲ. ಸತ್ತಮೇಲೆ ಅನ್ನಬೇಕು ಎಂಬ ಕಲ್ಪನೆ ಸಾಧ್ಯವೆ? ಹೀಗೆ ಸಂಸ್ಕೃತಿಯ ದೃಷ್ಟಿಯಿಂದ ಬಟ್ಟೆ ಮೇಲಿನ ತರಗತಿಗೇರಿದೆ. ಬಟ್ಟೆಗೆ ಪರಾಧೀನವಾದ ಹಳ್ಳಿ ಕನಸಿನಲ್ಲೂ ಸುಖಿಯಾಗಲಾರದು.

ಆದುದರಿಂದ ನೀವು ಶಪಥಮಾಡಬೇಕು: 'ಜಗತ್ತಿನ ತುಂಬಾ ಗಿರಣಿ ನಡೆದರೆ ನಡೆಯಲಿ, ಆ ಬಟ್ಟೆ ಅಗ್ಗವಾಗಿ ಸಿಕ್ಕರೆ ಸಿಗಲಿ, ಬಟ್ಟೆಯಾಗಿಯೆ ದೊರೆತರೂ ಸರಿಯೆ, ಹೊರಗಿನ ಬಟ್ಟೆಯನ್ನು ಕೊಂಡವನಿಗೆ ಎರಡಾಣೆ ಬಹುಮಾನ ಎಂದರೂ ಸರಿಯೆ, ನಾವು ಮಾತ್ರ ನಮ್ಮ ಹಳ್ಳಿಯಲ್ಲಿ ನಮ್ಮ ಕೈಯಿಂದಲೇ ನೇಯ್ದ ಬಟ್ಟೆಯನ್ನೇ ಉಡುತ್ತೇವೆ. ಸ್ವಾವಲಂಬಿಗಳಾಗುತ್ತೇವೆ. ಆಗಲೇ ವಿಕಾಸ. ಆದುದರಿಂದ ಈ ವಿಷಯದಲ್ಲಿ ನಾವು ಪರಾಧೀನರಾಗಿ ಇರುವುದಿಲ್ಲವೆಂದು ಭಗವಂತನ ಇದಿರಿಗೆ ಪ್ರತಿಜ್ಞೆ ಮಾಡುತ್ತೇವೆ.' ನೀವು ಇಂಥ ಪ್ರತಿಜ್ಞೆ ಮಾಡಿರೆಂದು ನನ್ನ ಪ್ರಾರ್ಥನೆ.

## ಹಳ್ಳಿ ಹಳ್ಳಿಯಲ್ಲಿ ಮನೆ ಮನೆಯಲ್ಲಿ ಸ್ವರಾಜ್ಯ

ಸರ್ವೋದಯದ ಕೆಲಸ ನೂರಾರು ಹಳ್ಳಿಗಳಲ್ಲಿ ನಡೆಯುತ್ತಿರುವಲ್ಲಿಯೂ ಈ ಮಾತನ್ನು ಸೂಚಿಸ ಬಯಸುತ್ತೇನೆ. ಹಳ್ಳಿಹಳ್ಳಿಯಲ್ಲೂ ಈ ಕೆಲಸ ನಡೆಯಬೇಕೆಂದು ನನ್ನ ಆಸೆ. ಅಲ್ಲಿ ಲಕ್ಷ್ಮಿ ಬೆಳೆಯಲಿ, ಹಳ್ಳಿ ಸುಖಿಯಾಗಲಿ, ಜೊತೆಯಲ್ಲಿ ಸ್ವಾಧೀನತೆಯೂ ಹೆಚ್ಚಲಿ. ನಮ್ಮ ದೇಶ ಸ್ವತಂತ್ರವಾಯಿತೆಂದು ಹೇಳುತ್ತಾರೆ. ಒಂದು ದೊಡ್ಡ ಭಾರವಿತ್ತು, ಅದು ಇಳಿಯಿತು. ದೊಡ್ಡ ಕೆಲಸವಾಯಿತು. ಸಂದೇಹವಿಲ್ಲ. ಇಷ್ಟರಿಂದಲೇ ನಾವು ಸ್ವತಂತ್ರರಾದಂತಾಗಲಿಲ್ಲ. ಸ್ವಾತಂತ್ರ್ಯ ಆತ್ಮದ್ದು, ಅದು ಮಾನಸಿಕ. ಇಂದಿಗೂ ನಾವು ಪ್ರತಿಯೊಂದಕ್ಕೂ ಸರಕಾರದ ಕಡೆಗೇ ನೋಡುತ್ತೇವೆ. ಪರಾಧೀನರಾಗಿದ್ದಾಗ ಪ್ರೀವಿ ಕೌನ್ಸಿಲ್‌ಗೆ ಹೋಗುತ್ತಿದ್ದೆವು. ಈಗ ದಿಲ್ಲಿಗೆ ಹೋಗುತ್ತೇವೆ. ಆದರೆ, ಮೊದಲನೆ ಕೋರ್ಟು ಹಳ್ಳಿ, ಕಡೆಯ ಕೋರ್ಟು ಪರಮೇಶ್ವರ ಆದಾಗ

ಸ್ವರಾಜ್ಯವಾಗುತ್ತದೆ. ಹಳ್ಳಿಯಲ್ಲಿ ಜಗಳವಾಡಬಹುದು, ಜಗಳ ತೀರಿಸಲು ಬಾರದೆ? ಜಗಳಗಂಟರೆಂದು ಲೋಕಕ್ಕೇ ಹೆಸರಾದವರ ಬಳಿಗೆ ನಮ್ಮ ಜಗಳ ಗಳನ್ನು ತೀರಿಸಿ ಎಂದು ನಾವು ಹೋಗಬೇಕೆ? ಸಿರುದ್ಯೋಗದ ದೆಸೆಯಿಂದ ಕಳವು ಆಗುತ್ತದೆ. ಕಳ್ಳನಿಗೆ ಕೋರ್ಟಿನಲ್ಲಿ ಶಿಕ್ಷೆ ಕೊಡುತ್ತಾರೆ. ನ್ಯಾಯವನ್ನು ತೂಗುವವರು ಯಾರು? ಇವರಿಗಿಂತ ದುಪ್ಪಟ್ಟು ನಿರುದ್ಯೋಗಿಗಳು. ಅವರು ಉತ್ಪಾದನೆಯ ಕೆಲಸ ಯಾವುದನ್ನೂ ಮಾಡರು. ಒಂದು ರಾಶಿ ಸಂಬಳ ತೆಗೆದುಕೊಳ್ಳುತ್ತಾರೆ. ಭೂಮಿಗೆ ಭಾರವಾಗುತ್ತದೆ. ಆ ಜೈಲರ್, ನ್ಯಾಯಾಧೀಶ, ವಕೀಲ, ಎಲ್ಲರೂ ನಿರುದ್ಯೋಗಿಗಳೇ. ನಾವು ಜಗಳವಾಡದಿದ್ದರೆ ಅವರಿಗೆ ಕೆಲಸವೇ ಇಲ್ಲ. ನಮ್ಮ ಜಗಳವನ್ನು ಅವರ ಬಳಿಗೆ ಒಯ್ದರೆ ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತದೆ. ಅಲ್ಲಿ ನಮಗೆ ನ್ಯಾಯ ದೊರೆಯುತ್ತದೆಂಬುದೂ ಭ್ರಾಂತಿ.

ನಮ್ಮ ಹಳ್ಳಿಯಲ್ಲಿ ನಾವು ಜಗಳವಾಡಬಹುದು. ಆದರೆ ಅದನ್ನು ಹೊರಗೆ ಒಯ್ಯುವುದಿಲ್ಲ. ಇದರ ಹೆಸರೇ ಗ್ರಾಮರಾಜ್ಯ. ಹಳ್ಳಿಯಲ್ಲಿ ಜಗಳವೇ ಆಗದಿದ್ದರೆ ಅದು ರಾಮರಾಜ್ಯ. ನಮ್ಮ ಜಗಳವನ್ನು ಪಟ್ಟಣಕ್ಕೆ ಒಯ್ಯುವುದು ಗುಲಾಮಗಿರಿ. ಈಗ ಲಂಡನ್ನಿನ ಬದಲು ದಿಲ್ಲಿಗೆ ಹೋಗಬೇಕಾಯಿತು. ಅಷ್ಟೇನು ವ್ಯತ್ಯಾಸವಾಗಲಿಲ್ಲ. ಬಾಯಾರಿದವನೊಬ್ಬನಿಗೆ ಹೇಳಿ—ಅಣ್ಣಾ, ಹಿಂದೆ ನೀರಿಗಾಗಿ ಐದು ಮೈಲಿ ಹೋಗಬೇಕಾಗಿತ್ತು. ಈಗ ಒಂದು ಮೈಲಿ ದೂರಕ್ಕೆ ಬಂದಿದೆ ನೀರು ಎಂತ. ಇದರಿಂದ ನನಗೇನು ಸಂತೋಷ. ಒಂದೇ ಗೇಣು ದೂರದಲ್ಲಿದೆ ನೀರು ಎಂದರೂ ಸಂತೋಷವಿಲ್ಲ. ನೀರು ಗಂಟಲೊಳಗೆ ಇಳಿದಾಗಲೇ ಸಂತೋಷ ಎಂದಾನು ಆತ. ಸ್ವರಾಜ್ಯ ದಿಲ್ಲಿಗೆ ಬಂತು, ಕಟಕ್‌ಗೆ ಬಂತು, ರಾಯಗಡಕ್ಕೂ ಬಂದಿದ್ದೀತು. ನಾವು ಹಳ್ಳಿಹಳ್ಳಿಯಲ್ಲೂ ಮನೆಮನೆಯೊಳಗೂ ಸ್ವರಾಜ್ಯ ತರಬಯಸುತ್ತೇವೆ. ಖಾದಿ–ಗ್ರಾಮೋದ್ಯೋಗಗಳಿಲ್ಲದೆ ಅದು ಸಾಧ್ಯವಿಲ್ಲ; ಭೂಮಿಯ ಹಂಚಿಕೆಯಾಗದೆ, ಗ್ರಾಮದಾನವಾಗದೆ ಸಾಧ್ಯವಿಲ್ಲ; ನಮ್ಮ ಜಗಳಗಳನ್ನು ನಮ್ಮ ಊರಿನಲ್ಲೇ ತೀರಿಸದೆ ಸಾಧ್ಯವಿಲ್ಲ.

ಕುಜೇಂದ್ರಿ—ಕೋರಾಪುಟ್
ಉತ್ಕಲ ೨೫-೯-೫೫

## ೩

# ಗ್ರಾಮಸ್ಥರಲ್ಲಿ ಪ್ರೇಮ ಬೆಳೆಯಬೇಕು

ಒಗ್ಗಟ್ಟಿನಲ್ಲೇ ಭಾರತದ ಹಿತ. ಜಾತಿಭೇದ ಮೊದಲಾದುದರಿಂದ ಮೊದಲೇ ಐಕ್ಯತೆಗೆ ಭಂಗ ಬಂದಿದೆ. ಈಗ ಇನ್ನೂ ಒಂದು ಹೊಸ 'ಬಾಧೆ' ಬಂದಿದೆ. ಇಂಗ್ಲೀಷರನ್ನು ಅನುಕರಿಸಿ ಇಲ್ಲಿ ರೂಢಿಗೆ ತಂದಿರುವ ಚುನಾವಣೆ ಪದ್ಧತಿಯಲ್ಲಿ ೫೧–೪೯ರ ಜಗಳ ನಡೆಯುತ್ತದೆ. ಅದರಿಂದ ಹಳ್ಳಿಹಳ್ಳಿಗಳಲ್ಲಿ ದ್ವೇಷ ಹರಡಿದೆ. ಭಾರತದಲ್ಲಿ ರೂಢಿಗೆ ಬಂದಿರುವ ಬಹುಮತ ರಾಜ್ಯವ್ಯವಸ್ಥೆ ಸುರಕ್ಷಿತವೆಂದು ನಾನು ಭಾವಿಸೆನು. ಹಿಂದಿನ ರಾಜ್ಯಪದ್ಧತಿಯಲ್ಲಿ ಅಲ್ಪಸಂಖ್ಯಾತರು ಬಹುಸಂಖ್ಯಾತರ ಮೇಲೆ ಆಡಳಿತ ನಡೆಸುತ್ತಿದ್ದರು. ಇಂದು ತದ್ವಿರುದ್ಧ ಬಹುಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ಆಡಳಿತ ನಡೆಸುತ್ತಾರೆ. ಬಹು ಸಂಖ್ಯಾತರ ಮೇಲೆ ಅಲ್ಪಸಂಖ್ಯಾತರು ಆಡಳಿತ ನಡೆಸುವುದೂ ತಪ್ಪು; ಬಹು ಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ಆಡಳಿತ ನಡೆಸುವುದೂ ತಪ್ಪು. ಶೇಕಡ ೫೧ ಮಂದಿಯ ರಾಜ್ಯವೇ ನಡೆದು, ಶೇಕಡ ೪೯ ಮಂದಿಗೆ ರಾಜ್ಯಾಡಳಿತದಲ್ಲಿ ಸೇವಾವಕಾಶ ಸಿಕ್ಕದಿರುವುದು ಸೂಕ್ತವಲ್ಲ. ಇಂದು ಹಳ್ಳಿಹಳ್ಳಿಗಳ ಜನ ಪಾರ್ಲಿಮೆಂಟ್ ಹಾಗೂ ಇತರ ಶಾಸನ ಸಂಸ್ಥೆಗಳ ಚುನಾವಣೆಯಲ್ಲಿ ಭಾಗವಹಿಸುತ್ತಾರೆ. ಉಮೇದುವಾರರಾಗಿ ನಿಂತುಕೊಳ್ಳುವವರ ಪೂರ್ಣಹೆಸರೂ ಹಳ್ಳಿಗರಿಗೆ ಗೊತ್ತಿರುವುದಿಲ್ಲ. ಅವರ 'ಮೋರೆ' ಯನ್ನೂ ನೋಡಿರುವುದಿಲ್ಲ. ಇನ್ನು ಅವರ ಗುಣಪರಿಚಯ ಹೇಗಾದರೂ ಇದ್ದೀತು ? ಇಂಥ ಪರಿಸ್ಥಿತಿಯಲ್ಲಿ ಲಕ್ಷಾಂತರ ಮಂದಿ 'ಓಟು' ಮಾಡುತ್ತಾರೆ. ಓಟುಗಳಿಸುವ ತಂತ್ರವೂ ಬೇಕಾದಷ್ಟು ನಡೆಯುತ್ತದೆ. ಇದೆಲ್ಲ ತಪ್ಪು. ಇದಕ್ಕೆ ಬದಲು ಹೀಗೆ ವ್ಯವಸ್ಥೆಯಾಗಬೇಕು:—೨೦ ವರ್ಷ ಮೀರಿರುವವರೆಲ್ಲರನ್ನೂ ಸೇರಿಸಿ ಅಥವಾ ಮನೆಗೊಬ್ಬರನ್ನು ತೆಗೆದುಕೊಂಡು 'ಗ್ರಾಮಸಭೆ' ಯನ್ನು ಏರ್ಪಡಿಸಬೇಕು. ಆಗ ಚುನಾವಣೆಯ ಪ್ರಶ್ನೆಯೇ ಏಳದು. ಆ ಸಭೆಗೆ ಗ್ರಾಮಸೇವೆ ಹಾಗೂ ಗ್ರಾಮಯೋಜನೆ ಮಾಡಲು ಪೂರ್ಣಾಧಿಕಾರವಿರಬೇಕು. ಪುನಃ ಅನುದಿನದ ಆಡಳಿತ ನಡೆಸಲು ಗ್ರಾಮಸಭೆ ತನ್ನಲ್ಲಿಯೇ ಏಳೆಂಟು ಜನರ ಸಣ್ಣ ಸಮಿತಿಯೊಂದನ್ನು ಸರ್ವಾನುಮತದಿಂದ ಚುನಾಯಿಸಬೇಕು. ಆ ಸಮಿತಿ ಆಡಳಿತ

ವಿವರಗಳನ್ನು ಸಭೆಯ ಮುಂದೆ ಮಂಡಿಸಬೇಕು. ಕೊನೆಯ ಅಧಿಕಾರ ಗ್ರಾಮಸಮಿತಿಯದೇ. ಸಮಿತಿಯ ಕಾರುಬಾರೆಲ್ಲ ಏಕಮತದಿಂದಲೇ ನಡೆಯಬೇಕು. ಗ್ರಾಮದಲ್ಲಿ ಈ ಬಗೆಯ ಸಮಿತಿ ಆಗಲು ಗ್ರಾಮದಾನದನಂತರವೇ ಸಾಧ್ಯ. ಹಾಗಾದಾಗ ಗ್ರಾಮಸೇವಾಕಾರ್ಯ ಬಹು ಚೆನ್ನಾಗಿ ನಡೆಯುತ್ತದೆ. ಮೇಲಿನ ಹಂತದ ಚುನಾವಣೆಗಳಲ್ಲಿ ಎಲ್ಲರೂ ಭಾಗವಹಿಸಬೇಕಾಗಿಲ್ಲ. ಅದರಲ್ಲಿ ಸಮಿತಿಯ ಸದಸ್ಯರು ಮಾತ್ರ ಭಾಗವಹಿಸಬೇಕು. ಗ್ರಾಮ ಕಾರ್ಯದ, ಗ್ರಾಮದ ಆಮದುರಫ್ತಿನ ನಿಯಂತ್ರಣದ, ಎಲ್ಲ ಅಧಿಕಾರವೂ ಗ್ರಾಮಸಭೆಗೇ. ಗ್ರಾಮದ ಮೇಲೆ ಹೊರಗಿನ ಯಾವ ವ್ಯಕ್ತಿಯ ಅಧಿಕಾರವೂ ನಡೆಯುವಂತಿಲ್ಲ. ಎಲ್ಲ ಗ್ರಾಮಗಳಲ್ಲೂ ಈ ರೀತಿ ವ್ಯವಸ್ಥೆ ಆಗಬೇಕು. ಗ್ರಾಮಗಳು ಬಹು ಚಿಕ್ಕವಾಗಿದ್ದರೆ ೩–೪ ಹಳ್ಳಿಗಳ ಒಂದು 'ಘಟಕ' ವನ್ನು ಏರ್ಪಡಿಸಿಕೊಳ್ಳಬಹುದು. ಹೀಗೆ ನಡೆದರೆ ಗ್ರಾಮಗ್ರಾಮಕ್ಕೂ ಸ್ವರಾಜ್ಯ ಬರುತ್ತದೆ. ಅಂಥ ವ್ಯವಸ್ಥೆಯಿಂದಲೇ ಭಾರತದ ಉನ್ನತಿ.

ಮೊದಲೇ ಅಷ್ಟಿಷ್ಟು ಭೇದ-ವೈಷಮ್ಯ ಇರುವ ಹಳ್ಳಿಗಳಲ್ಲಿ ಚುನಾವಣೆಯ ಕಾರಣದಿಂದ ಅದು ಇನ್ನೂ ಹೆಚ್ಚುತ್ತದೆ. ಗೋಕುಲಕ್ಕೆ ಬೆಂಕಿ ಹತ್ತಿಕೊಂಡಾಗ ಶ್ರೀಕೃಷ್ಣ ಅದನ್ನು ನುಂಗಿದನೆಂದು ಭಾಗವತದಲ್ಲಿ ಹೇಳಿದೆ. ಇಂದು ಎಲ್ಲರೂ ಬೆಂಕಿ ಹೊತ್ತಿಸುವವರೇ ಹೊರತು ನುಂಗುವವರು ಯಾರೂ ಇಲ್ಲ. ಹೊರಗಿನವರು ಬಂದು, 'ಸ್ವರ್ಗ ಬೇಕೆ, ಹಾಗಾದರೆ ನಮಗೆ ಓಟು ಕೊಡಿ, ನರಕ ಬೇಕೇ, ಹಾಗಾದರೆ ಬೇರೆಯವರಿಗೆ ಓಟುಕೊಡಿ' ಎಂದು ಹೇಳುತ್ತಾರೆ. ನಿಮ್ಮ ಕೈಯ್ಯಲ್ಲೇ ಇದೆ—ಸ್ವರ್ಗ ಅಥವಾ ನರಕ ಎಂದು ಯಾರೂ ಹೇಳರು. ಕುರಿಯ ಹಿತ ಕುರುಬನ ಕೈಯಲ್ಲೇ ಇರುವಂತೆ ಗ್ರಾಮಸ್ಥರ ಹಿತ ಹೊರಗಿನ ಯಾವನೋ ಕುರುಬನ ಕೈಲೇ ಇರುವುದೆಂದು ಅವರ ಭಾವನೆ. ಎಲ್ಲರ ಭಾವನೆಯೂ ಅದೇ. ಕುರುಬರು ಕುರುಬರಲ್ಲೇ ಜಗಳ. ಪ್ರತಿಯೊಬ್ಬರೂ ತಾವೇ ಒಳ್ಳೆಯ ಕುರುಬರೆಂದೂ ಬೇರೆಯವರು ಕೆಟ್ಟ ಕುರುಬರೆಂದೂ ಹೇಳುತ್ತಾರೆ. ಜನರಂತೂ ಅವರ ದೃಷ್ಟಿಯಲ್ಲಿ ಕುರಿಗಳು ! ನನ್ನ ಅಭಿಪ್ರಾಯ ಅದಕ್ಕೆ ತೀರಾ ವಿರುದ್ಧ. ಒಂದು ಮಾತು. ಗ್ರಾಮಸ್ಥರು ತಮ್ಮ ತಮ್ಮಲ್ಲೇ ಜಗಳವಾಡಿಕೊಳ್ಳುತ್ತಾ ಇರುವವರೆಗೆ ಅವರಿಗೆ 'ಕುರಿಗಳ ಪದವಿ' ಯೇ ಗಟ್ಟಿ. ದೂರದ ಊರಿನ ಕೋರ್ಟುಯಾತ್ರೆ ತಪ್ಪುವುದಿಲ್ಲ. ವರ್ಷ

ಗಟ್ಲೆ ವ್ಯವಹಾರ. ಎರಡೂ ಪಕ್ಷದವರನ್ನು ವಕೀಲರು ಲೂಟಿ ಮಾಡುತ್ತಾರೆ. ಎರಡೂ ಕಡೆಯ ವಕೀಲರು ತಮ್ಮ ತಮ್ಮಲ್ಲೇ ಸಂಬಂಧ ಬೆಳೆಸಿಕೊಂಡಿರುವುದೂ ಉಂಟು. ಯಾವ ಪಕ್ಷವೇ ಗೆಲ್ಲಲಿ, ಯಾವ ಪಕ್ಷವೇ ಸೋಲಲಿ, ಅವರಿಬ್ಬರ ಜೇಬೂ ತುಂಬಿಯೇ ತುಂಬುತ್ತದೆ. ಒಬ್ಬ ಮಹಾಪುರುಷ ಮರಣಶಯ್ಯೆಯಲ್ಲಿದ್ದನಂತೆ. ಇಬ್ಬರು ಜೋತಿಷ್ಕರು ಅವನ ಬಳಿ ಹೋಗುವ ಮುನ್ನ ಹೀಗೆ ಒಪ್ಪಂದ ಮಾಡಿಕೊಂಡರಂತೆ; ಇಬ್ಬರಲ್ಲಿ ಒಬ್ಬ ಆ ಮಹಾಪುರುಷ ಸಾಯುತ್ತೇನೆ ಎನ್ನುವುದು, ಇನ್ನೊಬ್ಬ ಆತ ಬದುಕುತಾನೆನ್ನುವುದು. ಎರಡರಲ್ಲೊಂದು ಆಗಲೇಬೇಕಲ್ಲ? ಇಬ್ಬರಲ್ಲೊಬ್ಬರ ಮಾತು ನಿಜವಾಗಿ, ಇನಾಮು ಸಿಕ್ಕಿಯೇ ಸಿಕ್ಕುತ್ತದೆ. ಯಾರ ಭವಿಷ್ಯ ನಿಜವಾಗುತ್ತದೆಯೋ ಆತನ ಹೆಸರಿನಲ್ಲಿ ಅಂಗಡಿ ತೆಗೆಯುವುದು. ಇನ್ನೊಬ್ಬ ಆತನಿಗೆ ಸಹಾಯಕನಾಗವುದು. ಒಟ್ಟಿನಲ್ಲಿ ಎರಡೂ ಬಗೆಯಿಂದ ಲಾಭ ಪಡೆಯುವುದು—ಇದುವೇ ಅವರಹಂಚಿಕೆ. ವಕೀಲರೂ ಹಾಗೆಯೇ ಮಾಡುತ್ತಾರೆ. ಇದನ್ನು ಗ್ರಾಮಸ್ಥರು ಅರಿತು ಒಳ ಜಗಳಗಳನ್ನು ಬಿಡಬೇಕು. ಒಂದು ಗ್ರಾಮದಲ್ಲಿ ಐವತ್ತು ವರ್ಷದಿಂದ ಒಳ ಜಗಳ ನಡೆದುಬಂದಿತ್ತು. ಮಾರಾಮಾರಿ, ಕೊಲೆ ಆಗಿ ಮೊಕದ್ದಮೆ ನಡೆದಿತ್ತು ಅವರಿಗೆ ನಾನು ತಿಳಿಸಿ ಹೇಳಿದೆ. ಭಗವಂತನ ಅವರಿಗೆ ಸದ್ಬುದ್ಧಿ ಕೊಟ್ಟ. ತಮ್ಮ ಜಗಳವನ್ನು ಬಿಟ್ಟು ಕೋರ್ಟಿನಲ್ಲಿದ್ದ ಮೊಕದ್ದಮೆಯನ್ನು ವಾಪಸು ಪಡೆದು ಎರಡು ಪಕ್ಷದವರೂ ಭೂದಾನ ಕಾರ್ಯದಲ್ಲಿ ತೊಡಗಿದರು. ಗ್ರಾಮದಾನ ದೊರೆಯಲಿ, ದೊರೆಯದಿರಲಿ, ಗ್ರಾಮದಲ್ಲಿ ಪ್ರೇಮ ಬೆಳೆಯುವುದು ಮುಖ್ಯ; ಇನ್ನು ಮುಂದೆ ಪ್ರತ್ಯೇಕವಾದ ಒಡೆತನ ಉಳಿಸಿಕೊಳ್ಳುವುದರಿಂದ ಸುಖವಿಲ್ಲ. ಅದರಿಂದ ಮಾಲಿಕ—ಕೂಲಿಗಾರರ ಜಗಳ ಹೆಚ್ಚುತ್ತದೆ. ಭೇದವನ್ನೆಲ್ಲಾ ತೊಡೆದು ಪ್ರೇಮದಿಂದ ಒಂದಾಗಿ ಬಾಳಿದರೆ ಗ್ರಾಮದ ಶಕ್ತಿ ವೃದ್ಧಿಯಾದೀತು. ಭಾರತದ ಸಂಕಟ ನೀಗೀತು.

## ೪

# ಗ್ರಾಮ ಸ್ವರಾಜ್ಯ ಸ್ಥಾಪನೆ

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾದವು. ಆದರೂ ದೇಶದ ಸ್ಥಿತಿಯಲ್ಲಿ ಹೆಚ್ಚು ವ್ಯತ್ಯಾಸವೇನೂ ಆಗಿಲ್ಲ. ವಿಜ್ಞಾನಯುಗದಲ್ಲಿ ಒಂದು ದಶಮಾನ ಸ್ವಲ್ಪವೇನಲ್ಲ. ವಿದೇಶೀ ಅಧಿಕಾರ ತೊಲಗಿದುದು ಮಹತ್ವದ ವಿಷಯವೇ. ಅಷ್ಟರಿಂದಲೇ ನಾವು ತೃಪ್ತಿಪಡುವಂತಿಲ್ಲ. ಗ್ರಾಮ ಗ್ರಾಮಗಳಿಗೆ ಸ್ವರಾಜ್ಯ ಬರಬೇಕು. ಸೂರ್ಯೋದಯದ ಅನುಭವ ಪ್ರತಿಯೊಂದು ಗ್ರಾಮಕ್ಕೂ ಆಗಬೇಕು. ದೆಹಲಿ, ಮದ್ರಾಸ್‌ಗಳಲ್ಲಿ ಮಾತ್ರ ಸೂರ್ಯೋದಯವಾದರೆ, ಸೂರ್ಯಪ್ರಕಾಶದ ಪ್ರತೀತಿ ನಮ್ಮ ಗ್ರಾಮಗಳಿಗೆ ಆಗುವುದಿಲ್ಲ. ಗ್ರಾಮದಲ್ಲೇ ಸೂರ್ಯೋದಯವಾದರೆ ಪ್ರತಿ ಮನೆಗೂ ಅದರ ಅನುಭವವಾಗುತ್ತದೆ. ಬೇಸಗೆ ಬರುತ್ತಿದೆಯೆಂದು ನಮಗೆ ಯಾರೂ ಹೇಳಬೇಕಾಗಿಯೇ ಇಲ್ಲ. ನಮಗೇ ಅದರ ಅನುಭವವಾಗುತ್ತದೆ. ಚಳಿಗಾಲ ಬಂದಿದೆಯೇ ಇಲ್ಲವೇ ಎಂಬುದನ್ನು ತಿಳಿಸಲು 'ಪಂಚಾಂಗ' ನೋಡುವ ಅಗತ್ಯವಿಲ್ಲ. ಛಳಿಯ ಅನುಭವ ನಮಗೇ ಆಗುತ್ತದೆ. ಹಾಗೆಯೇ ಸ್ವರಾಜ್ಯದ ಅನುಭವ ಎಲ್ಲರಿಗೂ ಆಗಬೇಕು.

ಸ್ವರಾಜ್ಯ ಬಂದಮೇಲೆ ಗ್ರಾಮದಲ್ಲಿ, ಹೊಲದಲ್ಲಿ, ಉದ್ಯೋಗದಲ್ಲಿ ಏನಾದರೂ ವ್ಯತ್ಯಾಸವಾಗಿದೆಯೇ? ಗ್ರಾಮದ ಕೊಳಕು ದೂರವಾಗಿದೆಯೆ? ಗ್ರಾಮದ ಜಗಳಗಳು ಕಡಮೆಯಾಗಿವೆಯೆ? ರೋಗ, ರುಜಿನಗಳು ಕಡಮೆಯಾಗಿವೆಯೆ? ಅಜ್ಞಾನ ಕಡಮೆಯಾಗಿದೆಯೆ? ಪ್ರೇಮ ವೃದ್ಧಿಯಾಗಿದೆಯೆ? ಸಹಕಾರ ಹೆಚ್ಚಿದೆಯೆ? ಈ ಎಲ್ಲ ವಿಷಯಗಳ ಅನುಭವ ಆಗಿದ್ದರೆ ಸ್ವರಾಜ್ಯ ಬಂದಿದೆಯೆನ್ನಬಹುದು. ಸ್ವರಾಜ್ಯವೊಂದು ಮಹಾಭಾಗ್ಯ! ಪ್ರತಿಯೊಬ್ಬನಿಗೂ ತನ್ನ ಕಾರುಬಾರನ್ನು ತಾನೇ ನಡೆಸಿಕೊಳ್ಳುವ ಅಧಿಕಾರವಿರುವುದೇ ಸ್ವರಾಜ್ಯ. ಇದು ಬಹಳ ದೊಡ್ಡ ವಿಷಯ. ನಮ್ಮ ಕಾರುಬಾರನ್ನು ನಾವೇ ನೋಡಿಕೊಳ್ಳುವ ಶಕ್ತಿ ಬರುವವರೆಗೆ ನಮ್ಮ ವಿಕಾಸವಾಗದು. ನಮ್ಮ ವ್ಯವಸ್ಥೆಯನ್ನು ಬೇರೆಯವರು ಎಷ್ಟು ಚೆನ್ನಾಗಿಯೇ ಮಾಡಿದರೂ ಅದರಿಂದ ನಮ್ಮ ವಿಕಾಸ ಆಗದು. ಪಂಜರದಲ್ಲಿರುವ ಗಿಣಿಗೆ ಎಷ್ಟೇ ಒಳ್ಳೆಯ ವ್ಯವಸ್ಥೆ ಮಾಡಿದರೂ ಅದಕ್ಕೆ ಜೀವನದ ಅನುಭವ ದೊರೆಯುವುದಿಲ್ಲ. ಗಳಿಳ೭ರ

ಮಾತು. ಮನೆಮನೆಗೂ ಸ್ವಾತಂತ್ರ್ಯಪ್ರಾಪ್ತಿಯ ಸಂದೇಶ ಮುಟ್ಟಿಸುತ್ತಿದ್ದೆ. ಒಂದು ಮನೆಯಲ್ಲಿ ಪಂಜರದಲ್ಲಿ ಗಿಣಿಯೊಂದನ್ನು ಇಟ್ಟಿದ್ದರು. ನಾನು ಆ ಮನೆಯವರಿಗೆ ಹೇಳಿದೆ. ನಾವು ಸ್ವರಾಜ್ಯಪ್ರಾಪ್ತಿಯ ಆನಂದವನ್ನು ನಿಜವಾಗಿ ವ್ಯಕ್ತಪಡಿಸಬೇಕಾದರೆ, ಗಿಣಿಯನ್ನು ಪಂಜರದಲ್ಲಿ ಇಡುವಂತಿಲ್ಲ. ನಾವು ಬಂಧ-ಮುಕ್ತರಾದಮೇಲೆ ಬೇರೆಯವರನ್ನು ಬಂಧನದಲ್ಲಿಡುವುದು ಸರಿಯಲ್ಲ. ಸ್ವರಾಜ್ಯಪ್ರೇಮಿ ತಾನೂ ದಮನಕ್ಕೆ ಸಿಗನು. ಬೇರೆಯವರನ್ನೂ ದಮನ ಮಾಡನು. ಯಾರಾದರೂ ನನ್ನನ್ನು ದಮನ ಮಾಡಿದರೆ, ಅದನ್ನು ಸಹಿಸದಿರುವುದು ಮಾತ್ರವೇ ಸ್ವರಾಜ್ಯದ ಲಕ್ಷಣವಲ್ಲ. ನಾನು ಯಾರ ದಮನವನ್ನೂ ಮಾಡುವುದಿಲ್ಲ ಎಂಬುದೂ ಸ್ವರಾಜ್ಯದ ಲಕ್ಷಣ. ಸ್ವರಾಜ್ಯ ಪ್ರಾಪ್ತಿಯಾದಮೇಲೆ ಗಿಣಿಯನ್ನು ಪಂಜರದಲ್ಲಿಡುವುದು ತರವಲ್ಲ. ಎಂದು ಹೇಳಿದಾಗ ಆ ಮನೆಯವರು ನನ್ನ ಮಾತಿಗೆ ಒಪ್ಪಿ ಗಿಣಿಯನ್ನು ಬಿಡುಗಡೆ ಮಾಡಿದರು. ಅದು ಸಂತೋಷದಿಂದ ಹಾರಿಹೋಯಿತು. ಮನೆಯಲ್ಲಿ ಅದಕ್ಕೆ ಆಹಾರ ವ್ಯವಸ್ಥೆ ಚೆನ್ನಾಗಿಯೇ ಇತ್ತು. ಆದರೂ ಸ್ವಾತಂತ್ರ್ಯದ ಆನಂದ, ವಿಕಾಸದ ಅವಕಾಶ ಇರಲಿಲ್ಲ. ಕಾಡಿನಲ್ಲಿ ಏಕಾಂಗಿಯಾಗಿ ಹಾರಾಡುವಾಗ ಸ್ವರಕ್ಷಣೆಯ ಜವಾಬದಾರಿ ಮೈಮೇಲೆ ಬರುತ್ತದೆ ; ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಆಗಲೇ 'ವಿಕಾಸ'ದ ಅರಿವು. ತನ್ನ ಕಾರುಬಾರನ್ನು ತಾನು ನಡೆಸಿಕೊಳ್ಳುವ ಅಧಿಕಾರ ದೊರೆಯುವುದೇ ಸ್ವರಾಜ್ಯದ ಆನಂದ.

ಸ್ವರಾಜ್ಯ ಬಂದಮೇಲೆ, ಗ್ರಾಮ ಗ್ರಾಮಗಳಲ್ಲಿ ಆ ಆನಂದ ಅನುಭವ ಆಗುತ್ತಿದೆಯೇ ?—ಎಂಬುದೇ ಪ್ರಶ್ನೆ. ಭಾರತದಿಂದ ವಿದೇಶೀಯರ ಅಧಿಕಾರ ತೊಲಗಿದಂತೆ, ಹಳ್ಳಿಗಳಿಂದ ಹೊರಗಿನವರ ಅಧಿಕಾರ ತೊಲಗಿದೆಯೆ ? ಸ್ವರಾಜ್ಯ ಪ್ರಾಪ್ತಿಗೆ ಮೊದಲು ಜಗಳಗಳ ಅಂತಿಮ ತೀರ್ಮಾನ 'ಲಂಡನ್'ನಲ್ಲಿ ಆಗುತ್ತಿತ್ತು. ಈಗ ದೆಹಲಿಯಲ್ಲಿ ಆಗುತ್ತದೆ. ಇದು ಸ್ವರಾಜ್ಯದ ಲಕ್ಷಣ. ಗ್ರಾಮದ ಜಗಳ ದಿಲ್ಲಿಗೆ ಹೋಗದೆ ಗ್ರಾಮದಲ್ಲಿಯೇ ತೀರ್ಮಾನವಾಗುವುದು ಗ್ರಾಮಸ್ವರಾಜ್ಯದ ಲಕ್ಷಣ. ಇದು ಆಗುವವರೆಗೆ ಗ್ರಾಮಸ್ಥರಿಗೆ ಸ್ವರಾಜ್ಯದ ಅನುಭವ ಆಗುವುದಿಲ್ಲ. ಲಂಡನ್ನಿನ 'ಥೇಮ್ಸ್' ನದಿಯಲ್ಲಿ ಸಿಕ್ಕುತ್ತಿದ್ದ ನೀರು ಈಗ ದಿಲ್ಲಿಯ 'ಯಮುನಾ' ನದಿಯಲ್ಲಿ ಸಿಕ್ಕುತ್ತದೆಂದ ಮಾತ್ರಕ್ಕೆ, ಹಳ್ಳಿ ಕೊಂಪೆಯಲ್ಲಿರುವವನ 'ಬಾಯಾರಿಕೆ' ಅಣಗೀತೆ ? ಅವನ ಮಟ್ಟಿಗೆ ೧೦೦೦೦

ಮೈಲಿ ದೂರದ 'ಥೇಮ್ಸ್', ೧೫೦೦ ಮೈಲಿ 'ಯಮುನಾ', ನೂರು ಮೈಲಿ ದೂರದ 'ಕಾವೇರಿ' ಎಲ್ಲವೂ ಒಂದೇ. ತನ್ನ ಗಂಟಲಿಗೆ ನೀರು ಬಿದ್ದಾಗಲೇ ದಾಹ ಅಡಗೀತು, ಸ್ವರಾಜ್ಯ ಬಂದಮೇಲೆ ನಮ್ಮ ದೇಶದ ದರಿದ್ರರ, ದುಃಖಿತರ, ದೀನಹೀನರ ಸ್ಥಿತಿ ಸುಧಾರಿಸಿದೆಯೇ ? ಇಲ್ಲ. ಇದಕ್ಕಾಗಿ ನಾನು ಯಾರ ಮೇಲೂ ದೋಷ ಹೊರಿಸುವುದಿಲ್ಲ. ಪ್ರತಿಯೊಂದು ಗ್ರಾಮವೂ ತನ್ನ 'ಸ್ವರಾಜ್ಯ' ಕ್ಕಾಗಿ ಶ್ರಮಿಸಬೇಕು. 'ಕಚ್ಚಾ ಮಾಲನ್ನು' ಗ್ರಾಮದಲ್ಲಿಯೇ 'ಪಕ್ಕಾಮಾಲು' ಮಾಡಬೇಕು. ಕೆಲವರ ಬಳಿ ಮಾತ್ರ ಜಮೀನು ಇದ್ದು ಉಳಿದವರಿಗೆ ಬೇರಾವ ಉದ್ಯೋಗವೂ ಇಲ್ಲದಿರುವಾಗ, ಅವರಿಗೆ ಸ್ವರಾಜ್ಯದ ಅನುಭವ ಹೇಗೆ ಆದೀತು ? ಇನ್ನೊಂದು ಗ್ರಾಮದ ಜನರಿಗೆ ಚೊಕ್ಕಭೋಜನ ಸಿಗುತ್ತದೆಂಬ ಸುದ್ದಿಯನ್ನು ಕೇಳಿದ ಮಾತ್ರದಿಂದಲೇ ಈ ಗ್ರಾಮದವರ ಹೊಟ್ಟೆ ತುಂಬುವುದೆ ? ಎಲ್ಲರಿಗಿಂತ ದುಃಖಿತರಾದ, ಪೀಡಿತರಾದ ಜನರ ಸ್ಥಿತಿ ಇದ್ದಂತೆಯೇ ಇದೆ. ಅವನಿಗೆ 'ಲೈಸನ್ಸ್' ಸಿಕ್ಕಿತು, ಇವನು 'ಮಿನಿಸ್ಟರ್' ಆದ. ಹೀಗೆಲ್ಲ ದೊಡ್ಡದೊಡ್ಡವರು ಜಗಳವಾಡಿಕೊಳ್ಳುತ್ತಾರೆ. ಯಾವ ಪಕ್ಷದವರನ್ನು ಆರಿಸಿ ಕಳುಹಿಸಿದರೂ ಬಡವರ ಸಂಕಟ ದೂರವಾಗುವಂತೆಯೇ ತೋರುವುದಿಲ್ಲ. ಎಲ್ಲಾ ದೊಡ್ಡವರ ಮೇಲಿನ ಕಿತ್ತಾಟವೇ. ಡಕಾಯಿತಿ ಮಾಡಲು ಹೋಗಿದ್ದಾಗ ಎಲ್ಲರೂ ಒಂದಾಗಿದ್ದರು. ಕೈಗೆ 'ಐಶ್ವರ್ಯ' ಸಿಕ್ಕಿ ಹಂಚಿಕೊಳ್ಳುವ ಸಮಯ ಬಂದಾಗ ಅವರವರಲ್ಲೇ ಕಿತ್ತಾಟ ! ಅವರವರ ಜಗಳದಲ್ಲಿ ಬಡವರನ್ನು ಕೇಳುವವರೇ ಇಲ್ಲ. ಇಂದು ವಾಸ್ತವವಾಗಿ ನೋಡಿದರೆ ಬಡವರು ಬಲ್ಲಿದರು ಇಬ್ಬರೂ ಸಂಕಟಕ್ಕೆ ಸಿಕ್ಕಿದ್ದಾರೆ. ಸಂಕಟದ ಬಗೆ ಮಾತ್ರ ಭಿನ್ನ, ತಿಂದು ಅರಗಿಸಿಕೊಳ್ಳಲು ಆಗದಷ್ಟು ಅಪಾರ ಆಹಾರ ಒಬ್ಬರ ಹತ್ತಿರ. ಇನ್ನೊಬ್ಬರ ಬಳಿ ಏನೂ ಇಲ್ಲ. ಶ್ರೀಮಂತರ ಬಳಿ ಇರುವುದನ್ನು ಕಿತ್ತುಕೊಳ್ಳಿ ಎಂದು ಕಮ್ಯೂನಿಸ್ಟರು ಹೇಳುತ್ತಾರೆ, ಅವರ (ಶ್ರೀಮಂತರ) ಬಳಿ ಇರುವ ಸಂಪತ್ತಾದರೂ ಯಾವುದು ? ಧಾನ್ಯ, ಹಣ್ಣು, ತರಕಾರಿ, ತುಪ್ಪ, ಹಾಲು, ಬೆಣ್ಣೆ–ಇವುಗಳಲ್ಲಿ ಯಾವುದಿದೆ ? **ಅವರ ಬಳಿ ಇರುವುದು ನಾಸಿಕದ ಟಂಕಶಾಲೆಯಲ್ಲಿ ಮುದ್ರಿತವಾದ ಕಾಗದದ ಚೂರು. ಅಷ್ಟೆ!**

ಒಮ್ಮೆ ಮಿತ್ರನೊಬ್ಬನೊಡನೆ 'ಗಾಳಿ ಸಂಚಾರ' ಮಾಡುತ್ತಿದ್ದೆ. ಗೆಳೆಯನ ದೃಷ್ಟಿ ದಾರಿಯಲ್ಲಿ ಬಿದ್ದಿದ್ದ ಚಿನ್ನದ ಒಡವೆಯೊಂದರಮೇಲೆ ಹರಿಯಿತು.

ಅದನ್ನು ಏನು ಮಾಡಬೇಕೆಂದು ಆತ ಕೇಳಿದ. 'ಕಲ್ಲನ್ನು ಬಿಸುಡುವಂತೆ ಬಿಸುಟುಬಿಡು '-ಎಂದು ಹೇಳಿದೆ. ಆತ ಹಾಗೆಯೇ ಮಾಡಿದ. ಆಮೇಲೆ ನಾನು ಆತನಿಗೆ ಧರ್ಮ ಬೋಧೆ ಮಾಡಿದೆ. ಚಿನ್ನವೆಂಬುದು ಮಣ್ಣಿನಲ್ಲಿ ಬೆರೆತ ಕಲ್ಲಿನ ಚೂರು ತಾನೆ? ವಜ್ರ, ಮುತ್ತು ಮೊದಲಾದ ಕಲ್ಲುಗಳ ಉಪಯೋಗ ವಾದರೂ ಏನು ? ಸತ್ತಮೇಲೆ ಯಾವುದೂ ಜತೆಗೆ ಬಾರದು, ಅದಕ್ಕೆ ಏನೂ ಬೆಲೆಯೇ ಇಲ್ಲ. ಅದಕ್ಕೆ ನಿಜವಾಗಿ ಒಂದು ಸೇರು ಅಕ್ಕಿಯ ಬೆಲೆಯೂ ಇಲ್ಲ. ಆ ಕಲ್ಲಿನಿಂದ ಹೊಟ್ಟೆ ತುಂಬುತ್ತದೆಯೆ ? ಧಾನ್ಯ, ಹಾಲು, ತುಪ್ಪ ಉತ್ಪತ್ತಿ ಮಾಡುವವರೇ ನಿಜವಾಗಿ ಶ್ರೀಮಂತರು. ಇಂದು ಗ್ರಾಮದ ಜನ ತುಪ್ಪ, ಹಾಲು, ಮಾರಿಬಿಡುತ್ತಾರೆ. ಅವರ ಮಕ್ಕಳಿಗೆ ಎಲ್ಲಕ್ಕೂ ಸೊನ್ನೆ ಹಾಕುತ್ತಾರೆ. ತುಪಾಕಿಯವನು ಭಯ ತೋರಿಸಿ ಲೂಟಿ ಮಾಡುವಂತೆ, ದುಡ್ಡಿದ್ದವರು 'ಲೋಭ' ತೋರಿಸಿ, ಹಾಲು-ತುಪ್ಪವನ್ನು ಲೂಟಿ ಮಾಡುತ್ತಾರೆ. ಗ್ರಾಮಸ್ಥರು ಬುದ್ಧಿವಂತರಾದರೆ, ಮೊದಲು ತಮ್ಮ ಮಕ್ಕಳಿಗೆ ಹಾಲು-ತುಪ್ಪ ಉಣ್ಣಿಸಬೇಕು. ಹಾಗಾದರೆ ಪಟ್ಟಣದ ಮಕ್ಕಳಿಗೆ ಹಾಲು, ತುಪ್ಪ, ಬೇಡವೆ ಎಂದು ಯಾರಾದರೂ ಕೇಳಬಹುದು. ಅದು ಬೇಕಾದರೆ ಪಟ್ಟಣದವರೂ ಮನೆಯಲ್ಲಿ ಹಸು ಇಟ್ಟುಕೊಂಡು ಗೋಸೇವೆ ಮಾಡಬೇಕು. ಮಕ್ಕಳಿಗೂ ಆ ಕೆಲಸ ಹಚ್ಚಬೇಕು. ಕಾಲೇಜು ವಿದ್ಯಾರ್ಥಿಗಳು ಸಗಣಿ ಎತ್ತುವುದನ್ನು ಹಾಲು ಕರೆಯುವುದನ್ನು ಕಲಿಯಬೇಕು. ಆಗಲೇ ಅವರಿಗೆ ಹಾಲು, ತುಪ್ಪ. ಕೈ ಕೆಸರಾದರೆ ಬಾಯಿ ಮೊಸರು. ಇಂಥ ಸ್ಥಿತಿಯನ್ನು ತರುವುದು ಗ್ರಾಮಸ್ಥರ ಕೈಯಲ್ಲಿದೆ. ಅಂಥ ಸ್ಥಿತಿ ಬಂದಾಗಲೇ ಗ್ರಾಮ-ಗ್ರಾಮಗಳಲ್ಲೂ ಸ್ವರಾಜ್ಯ. ಅದರ ಸಲುವಾಗಿ ಗ್ರಾಮಸ್ಥರಲ್ಲಿ ಆತ್ಮನಿಷ್ಠೆ ಹುಟ್ಟಬೇಕು.

ಆ ಆತ್ಮನಿಷ್ಠೆ ಹುಟ್ಟಬೇಕಾದರೆ ಭೂಮಿಯ ಒಡೆತನ ಹೋಗಬೇಕು. ಗ್ರಾಮೋದ್ಯೋಗಗಳು ಬೆಳೆಯಬೇಕು. ಗ್ರಾಮರಾಜ್ಯದ ಸಮೂಹ ಬೆಳೆದಾಗಲೇ ದೇಶದಲ್ಲಿ ನಿಜವಾದ ಸ್ವರಾಜ್ಯ ಸ್ಥಾಪಿತವಾಗುವುದು. ಆಗ ದೇಶದ ರಕ್ಷಣೆಯ ಸಲುವಾಗಿ ಸೈನ್ಯವಿಡಬೇಕಾದ ಅಗತ್ಯವೇ ಇರುವುದಿಲ್ಲ. ನಮ್ಮ ದೇಶದ ನೈತಿಕ ಪ್ರಭಾವ ಇಡೀ ಪ್ರಪಂಚದ ಮೇಲೆ ಆಗಿ, ಪ್ರಪಂಚದಲ್ಲಿ ಶಾಂತಿ ನೆಲೆಸೀತು.

# ಭೂದಾನ-ಸರ್ವೋದಯ ಸಾಹಿತ್ಯ

| | ರೂ. | ಆ. | ಪೈ |
|---|---|---|---|
| ದೀಕ್ಷಾ .... | ೧ | ೪ | ೦ |
| ಹಳ್ಳಿಹಳ್ಳಿಯಲ್ಲಿ ಸ್ವರಾಜ್ಯ | ೦ | ೨ | ೦ |
| ಬಡ್ಡಿ–ಬಿಡತಿ .... | ೦ | ೨ | ೦ |
| ಗೀತಾ ಪ್ರವಚನ .... (ಪರಿವರ್ಧಿತ, ಪರಿಷ್ಕೃತ ಮುದ್ರಣ) | ೧ | ೦ | ೦ |
| ಶಿಕ್ಷಣ ವಿಚಾರ .... | ೧ | ೮ | ೦ |
| ಸ್ವರಾಜ್ಯ ಶಾಸ್ತ್ರ .... | ೦ | ೧೨ | ೦ |
| ಈಶಾವಾಸ್ಯ ವೃತ್ತಿ .... | ೦ | ೮ | ೦ |
| ಸ್ಥಿತಪ್ರಜ್ಞ ದರ್ಶನ .... | ೧ | ೮ | ೦ |
| ವ್ಯಾಪಾರಿಗಳಿಗೆ ಕರೆ .... | ೦ | ೨ | ೦ |
| ಕಾರ್ಮಿಕರಿಗೆ .... | ೦ | ೨ | ೦ |
| ರಾಮನಾಮ .... | ೦ | ೪ | ೦ |
| ಒಟ್ಟಾಗಿ-ಒಳ್ಳೆಯವರಾಗಿ | ೦ | ೨ | ೦ |
| ಗ್ರಾಮರಾಜ್ಯ .... | ೦ | ೨ | ೦ |
| ಗ್ರಾಮದಾನ .... | ೦ | ೨ | ೦ |
| ಸಂಪತ್ತಿ ದಾನಯಜ್ಞ.... | ೦ | ೪ | ೦ |
| ಆಶ್ರಮ ಜೀವನ .... | ೦ | ೨ | ೬ |
| ರಾಮನಾಮ .... | ೦ | ೪ | ೦ |
| ಶ್ರಮದಾನ .... | ೦ | ೪ | ೦ |
| ಪ್ರಾರ್ಥನೆ .... | ೦ | ೨ | ೦ |
| ಭೂದಾನ ಗೀತೆಗಳು (ವೆಂಕೋಬರಾವ್) | ೦ | ೨ | ೦ |
| ಸಂತ ವಿನೋಬಾ.... | ೦ | ೪ | ೬ |
| ಸಾಮ್ಯ ವಾದ–ಸಾಮ್ಯಯೋಗ | ೦ | ೧ | ೦ |
| ವಿನೋಬಾ .... (ಜೀವನ ಚರಿತ್ರೆ) —ಕೃಷ್ಣಶರ್ಮ | ೧ | ೦ | ೦ |
| ಮೂಲ ಶಿಕ್ಷಣ .... | ೧ | ೮ | ೦ |
| ಭೂದಾನ ಯಜ್ಞ ಸಮಗ್ರ ದರ್ಶನ (ಚಾರುಚಂದ್ರ ಭಂಡಾರಿ) | ೧ | ೮ | ೦ |
| ಭೂದಾನ ಯಜ್ಞ-ಯಾತ್ರೆ | ೧ | ೮ | ೦ |
| ಶ್ರದ್ಧಾಂಜಲಿ | ೦ | ೨ | ೬ |


## ಸರ್ವ ಸೇವಾ ಸಂಘ ಪ್ರಕಾಶನ

ನಂ. 17, I ಮೈನ್ ರೋಡ್,

ಚಾಮರಾಜಪೇಟೆ :: ಬೆಂಗಳೂರು 2